ಕೊಪ್ಪರ ಕ್ಷೇತ್ರ ಮಹಿಮೆ



ಶ್ರೀ ನರಹರಿ ಪ್ರಕಾಶನ, ಕೊಪ್ಪರ

ಕೊಪ್ಪರ ಕ್ಷೇತ್ರ ಮಹಿಮೆ

ಲೇಖಕ:
ಗುರುರಾಜ ಪ್ರಿಯ ಪಂಡಿತ
ಚಿಕ್ಕೇರೂರು ಗೋವಿಂದಾಚಾರ್ಯ
ಹರಪನ ಹಳ್ಳಿ.

ಶ್ರೀ ನರಹರಿ ಪ್ರಕಾಶನ, ಕೊಪ್ಪರ

koppara kshetra Mahime : Written by Shri Govinda charya
Chikkeruru, Hrapanahalli and Published by k.Jayacharya
Koppara, Deodurg Taluk, Riachur district.

ಮೊದಲ ಮುದ್ರಣ : 2003

ಪ್ರಕಾಶಕರು :

ಕೆ . ಜಯಾಚಾರ್ಯ

ಅಂಚೆ। ಕೊಪ್ಪರ
ತಾ. : ದೇವದುರ್ಗ
ಜಿ. : ರಾಯಚೂರು.

ಮುದ್ರಕರು :

ಭವಾನಿ ಗ್ರಾಫಿಕ್ಸ್

ಶೆಟ್ಟಿ ಭಾವಿ ಚೌಕ್, ಪಟೇಲ ರಸ್ತೆ,
ರಾಯಚೂರು - 584 103. ದೂ : 255271

ಮುನ್ನುಡಿ

ನಮ್ಮ ದೇಶದಲ್ಲಿ ಮಹಿಮಾನ್ವಿತವಾದ ಅಸಂಖ್ಯಾತ ಕ್ಷೇತ್ರಗಳಿವೆ. ಅಂಥವು ಗಳಲ್ಲಿ ಒಂದು ಕೊಪ್ಪರ. ಈ ಕ್ಷೇತ್ರದ ಮಹಿಮೆಯ ಕಿರು ಪರಿಚಯವನ್ನು ಶ್ರೀ ಚಿಕ್ಕೆರೂರು ಗೋವಿಂದಾಚಾರ್ಯರು "ಕೊಪ್ಪರ ಕ್ಷೇತ್ರ ಮಹಾತ್ಮೆ" ಪುಸ್ತಕದಲ್ಲಿ ನೀಡಿದ್ದಾರೆ. ಶ್ರೀಯುತರು ಮಹಾ ವಿದ್ವಾಂಸರು, ಸಂಸ್ಕೃತ ಪಂಡಿತರು ಇದಕ್ಕಿಂತ ಮಿಗಿಲಾಗಿ ಭಗವದ್ಭಕ್ತರು. ಈಗಾಗಲೇ ಇಂಥ ಅನೇಕ ಸ್ಥಳ ಮಹಿಮೆಯ ಪುಸ್ತಕಗಳನ್ನು ಬರೆದಿದ್ದಾರೆ.

ಇವರು ಕೊಪ್ಪರ ಕ್ಷೇತ್ರದ ಸ್ಥಳ ಪರಿಚಯ ಹಾಗೂ ನಡೆದ ಘಟನೆಗಳನ್ನು ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯಲ್ಲಿ ಸವಿಸ್ತಾರವಾಗಿ ಬರೆದಿದ್ದಾರೆ. ಅವರ ಈ ಕಾರ್ಯವು ಅತ್ಯಂತ ಉಪಯುಕ್ತವಾದುದಾಗಿದೆ. ಸದ್ಭಕ್ತರಿಗೆ ಸರಳವಾಗಿ ಅನುಕೂಲವಾಗುವಂತೆ ಅರ್ಥವಾಗುವಂತೆ ನಿರೂಪಿಸಲು ಪ್ರಯತ್ನಿಸಿದ್ದಾರೆ. ಇವರ ಪ್ರಯತ್ನವು ಸಫಲವಾಗಿದೆ ಎಂದು ಹೇಳಬಹುದು. ಈ ಕೃತಿಯನ್ನು ಬರೆದಿದ್ದಕ್ಕಾಗಿ ಅವರಿಗೆ ಕೊಪ್ಪರ ಶ್ರೀ ಲಕ್ಷ್ಮೀ ನರಸಿಂಹನ ಅರ್ಚಕ ಮನೆತನದವರಿಂದ ಹೃತ್ಪೂರ್ವಕ ಧನ್ಯವಾದಗಳು.

ಈ ಕೃತಿಯಲ್ಲಿ ಸಂಸ್ಕೃತ ವಿದ್ವಾಂಸರೂ, ಜ್ಯೋತಿಷ್ಯಜ್ಞಾನಿಗಳೂ, ಸಂಗೀತ ಜ್ಞಾನವುಳ್ಳವರೂ ಆದ ಶ್ರೀ ಗುಡೇಬಲ್ಲೂರು ರಾಘವೇಂದ್ರಾಚಾರ್ಯರು ರಚಿಸಿದ "ಶ್ರೀ ಲಕ್ಷ್ಮೀ ನರಸಿಂಹನ ಸುಪ್ರಭಾತ" ವನ್ನು ಸೇರಿಸಲಾಗಿದೆ. ಶ್ರೀ ಯುತರು ಖಾದ್ರಿ ವಿರಚಿತ "ಹನುಮದ್ವಿಲಾಸ" ವನ್ನು ಸಂಪೂರ್ಣವಾಗಿ ಸುಶ್ರಾವ್ಯವಾಗಿ ಹಾಡುತ್ತಾರೆ. ಉತ್ತಮವಾದ ಪದ್ಯಗಳನ್ನು ಕೂಡ ರಚಿಸಿದ್ದಾರೆ ಗುಡೇಬಲ್ಲೂರಿನ ಉದ್ಭವ ವೆಂಕಟೇಶನ ಅರ್ಚಕರಾಗಿದ್ದಾರೆ. ಕೊಪ್ಪರ ಶ್ರೀ ಲಕ್ಷ್ಮೀ ನರಸಿಂಹನ ಸುಪ್ರಭಾತವನ್ನು ಸಂಸ್ಕೃತದಲ್ಲಿ ಸುಲಲಿತವಾಗಿ ರಚಿಸಿ ಸ್ವಾಮಿಗೆ ಅಪೂರ್ವ ಸೇವೆ ಸಲ್ಲಿಸಿದ್ದಾರೆ. ಇದಕ್ಕಾಗಿ ಅವರಿಗೆ ಧನ್ಯವಾದಗಳು.

ಕೊಪ್ಪರ ಕ್ಷೇತ್ರದ ಮಹಿಮೆಯನ್ನು ಕುರಿತು, ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯ ಅರ್ಚಕರಾಗಿದ್ದ ದಿ. ಶ್ರೀ ಗಿರಿಯಾಚಾರ್ಯರು ಅರವತ್ತೈದು ಪದ್ಯಗಳ ಒಂದು ದೀರ್ಘ ರಚನೆಯನ್ನು ಮಾಡಿದ್ದಾರೆ. ಕ್ಷೇತ್ರ ಮಹಿಮೆಯನ್ನು ಕುರಿತ ಮೊತ್ತ ಮೊದಲ ಬರಹದ ದಾಖಲೆ ಇದು. ಭಕ್ತರ ಅನುಕೂಲಕ್ಕಾಗಿ ಈ ಪದ್ಯ ವನ್ನು ಈ ಪುಸ್ತಕದಲ್ಲಿ ಸೇರಿಸಲಾಗಿದೆ.

ಒಟ್ಟಿನಲ್ಲಿ ಈ ಕ್ಷೇತ್ರ ಮಹಿಮೆಯ ಪುಸ್ತಕವು ಕೊಪ್ಪರ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿಯನ್ನು ಕುರಿತು ಸದ್ಭಕ್ತರಿಗೆ ಹೆಚ್ಚಿನ ತಿಳುವಳಿಕೆಯನ್ನು ನೀಡುವಲ್ಲಿ ಸಫಲವಾಗಿದೆ ಎಂದು ಹೇಳಬಹುದು. ಸದ್ಭಕ್ತರಿಗೆ ಈ ಪುಸ್ತಕವನ್ನು ತಲುಪಿಸುವಲ್ಲಿ ನನಗೆ ಬಹಳ ಸಂತೋಷವೆನಿಸುತ್ತದೆ.

ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಸಕಾಲದಲ್ಲಿ ಮುದ್ರಿಸಿ ಕೊಟ್ಟ ಸುರಭಿ ಮುದ್ರಣಾಲಯದ ಶ್ರೀ ಹಳಕಟ್ಟಿ ಬಂಧುಗಳಿಗೆ ಧನ್ಯವಾದಗಳು.

ಕೊಪ್ಪರ
2003

ಕೆ.ಜಯಾಚಾರ್ಯ
ಪ್ರಕಾಶಕರು

ಅರಿಕೆ

ಶ್ರೀ ಶ್ರೀ ಅಶ್ವತ್ಥನರಸಿಂಹೋ ವಿಜಯತೇ
ಶ್ರೀ ಶ್ರೀ ವೆಂಕಟನರಸಿಂಹ ಪ್ರಸನ್ನ
ಶ್ರೀ ಆನಂದ ತೀರ್ಥ ಗುರುಭ್ಯೋನಮಃ

॥ ಹರಿಃ ಓಂ ॥

ಭಾರತದಲ್ಲಿ ಪುಣ್ಯಕರವಾದ ಯಾವುದೇ ನದಿಯಾಗಲಿ ತನ್ನ ಜನ್ಮಸ್ಥಳದಿಂದ ನೂರಾರು ಮೈಲಿಗಳು ಪ್ರವಹಿಸಿ ಬಂದರೂ ಅಮೂಲಾಗ್ರ ಪವಿತ್ರ ತೀರ್ಥವೇ ಆದರೆ ಕೆಲವೊಂದು ಪ್ರದೇಶಕ್ಕೆ ಹರಿದು ಬಂದಾಗ ಆ ಭೂಪ್ರದೇಶದ ಮಹಿಮೆಯಿಂದಾಗಿ ಅದೇ ನದಿಯೇ ಶತಗುಣಿತ ಸಹಸ್ರಗುಣಿತ ಪಾಪಪರಿಹಾರಕ ಸಾಮರ್ಥ್ಯವನ್ನೂ ಹೊಂದುತ್ತದೆ. ಹೀಗೆ ಸ್ವರೂಪತಃ ಪವಿತ್ರಮವಾದ ಭೂಮಿ, ನದೀ ಪ್ರವಾಹ, ಅಲ್ಲಿಸನ್ನಿಹಿತವಾದ ದೇವತಾಮೂರ್ತಿಗಳ ವೈಭವ. ಈ ಮೂರೂ ಒಟ್ಟುಗೂಡಿ '' ಪುಣ್ಯ ಕ್ಷೇತ್ರ '' ವೆಂದು ಪುರಾಣಗಳಲ್ಲಿ ಉಕ್ತವಾಗಿದೆ. ಇಂತಹ ಸುಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲಿ ಒಂದಾದ ''ಶ್ರೀ ಕಾರ್ಪರ ಕ್ಷೇತ್ರ'' ಅಥವಾ ಕೊಪ್ಪರ ಕ್ಷೇತ್ರದ ಲಘುಪರಿಚಯವನ್ನು ಈ ಲೇಖನದಲ್ಲಿ ಕೊಡಲಾಗಿದೆ.

ಈ ಕ್ಷೇತ್ರದಲ್ಲಿ ''ಶ್ರೀಕೃಷ್ಣ'' ಅಥವಾ '' ಕೃಷ್ಣವೇಣಿ'' ನದಿಯು ಪ್ರವಹಿಸುತ್ತದೆ. ಇದು ಮಹಾನದಿಯೆಂತಲೂಗಂಗಾನ'ದಿಯಷ್ಟೆ ಪವಿತ್ರ ತಮವಾದ ಪಂಚಗಂಗಾಂತರ್ಗತ ವಾಗಿದೆಯೆಂತಲೂ ಪ್ರಸಿದ್ಧವಾಗಿದೆ. ಈ ನದಿಯು ಶ್ರೀ ಮನ್ನರ ನಾರಾಯಣರ ಉಂಗುಷ್ಟದಲ್ಲಿ ಜನಿಸಿ ಬ್ರಹ್ಮಲೋಕಕ್ಕೆ ಇಳಿಯಿತು. ದೇವತೆಗಳ ಪ್ರಾರ್ಥನೆಯ ಮೇರೆಗೆ ಶಿವನ ಜಟಾಜೂಟಕ್ಕಿಳಿದು ನಂತರ ಶ್ರೀ ಜಾಬಾಲಿ ಋಷಿಗಳ ಉಗ್ರ ತಪಸ್ಸು, ಪ್ರಾರ್ಥನೆಯ ಮೇರೆಗೆ ಮಿಕ್ಕ ಲೋಕಗಳಿಗೆ ಪ್ರವಹಿಸಿ ಬಂದಿತು. ಮಹಾಬಲೇಶ್ವರದಲ್ಲಿರುವ ತೀರ್ಥವು ಇದೇ. ಅಲ್ಲಿಂದ ಸೂರ್ಪಾಲಿ, ಕಪಟಸಂಗಮ ಛಾಯಾ, ಶ್ರೀಶೈ ಲಗಳಲ್ಲೆಲ್ಲಾ ಪ್ರವಹಿಸಿದೆ. ಈ ನದಿಯ ಅಕ್ಕ ಪಕ್ಕ ನಾಲ್ಕೂ ವರೆ ಯೋಜನ ಪ್ರದೇಶವೆಲ್ಲವೂ ಮಹಾತೀರ್ಥವೇ. ಇದು ಎರಡುಕಡೆ ಸಮುದ್ರವನ್ನುಪ್ರವೇಶಿಸುವುದು. ಇಲ್ಲಿಸ್ನಾನವು ವಾಜಪೇಯ ಯಜ್ಞ ಮಾಡಿದಷ್ಟು ಫಲವನ್ನು ಕೊಡುತ್ತದೆ ಎಂದು ಪರಮ ಪೂಜ್ಯ ದಾಸಾರ್ಯರಾದ ಶ್ರೀ ವಿಜಯದಾಸರು ಮತ್ತು ಜಗನ್ನಾಥ ದಾಸರು ತಮ್ಮ ತೀರ್ಥಕ್ಷೇತ್ರ ಸುಳಾದಿಗಳಲ್ಲಿ ಹೇಳಿರುತ್ತಾರೆ(ವರದೇಂದ್ರ ಹರಿದಾಸ ಸಾಹಿತ್ಯ ಮಂಡಳ ಪ್ರಕಟಣೆ ಪು. 327-329) ಈ ಕೃಷ್ಣಾ ನದಿಯ ಮಹಾಮಹಿಮೆಯನ್ನು ಎಷ್ಟು ಬಣ್ಣಿಸಿದರೂ ತೀರದು. ಇದೇ ಕೃಷ್ಣಾ ತರಂಗಿಣಿಯಲ್ಲಿ ಪ್ರಸಿದ್ಧವಾದ ಘಟ್ಟಒಂದಿದೆ. ಅದನ್ನು ''ಜಾತಿಸ್ಮರಹ್ರದ'' ವೆಂದು ಕರೆಯುತ್ತಾರೆ, ಅಂದರೆ 'ದೇವಹ್ರದ' ವೆಂದು ಅರ್ಥ. 1 ಈ ಮಡುವಿನಲ್ಲಿಸ್ನಾನ ಮಾಡಿದ ಅಧಿಕಾರ ವರ್ಗಕ್ಕೆ ಅವರವರ ಪೂರ್ವಜನ್ಮದ ಸ್ಮೃತಿಯೇ ಪ್ರಾಪ್ತವಾಗುವುದು ಎಂದು ಶ್ರೀ ಮನ್ಮಮಹಾಭಾರತದಲ್ಲಿ ಉಕ್ತವಾಗಿದೆ. ಅಲ್ಲದೇ ಈ ನದಿಯ ಮಹಿಮೆಯನ್ನು ಅಪರೋಕ್ಷ ಜ್ಞಾನಿಗಳೂ, ದೇವಾಂಶ ಸಂಭೂತರೂ ಆದ ಶ್ರೀ ಶ್ರೀ ವಾದಿರಾಜತೀರ್ಥ ಶ್ರೀಪಾದಂಗಳವರು ಬಾಯ್ತುಂಬಾ ಹೊಗಳಿದ್ದಾರೆ. ಕಲಿಯುಗದಲ್ಲಿ ಕೃಷ್ಣಸ್ನಾನ, ಶ್ರೀ ಕೃಷ್ಣಾಧ್ಯಾನ ಇವೆರಡೆ ಶ್ರೇಷ್ಠತಮವಾದ ಸಾಧನೆಯೆಂದು ಶ್ರೀ ವಿಜಯದಾಸರು ಹೇಳಿದ್ದಾರೆ. ಇಂತಹ ಪರಮಪವಿತ್ರವಾದ ಕಾರ್ಪರ ಕ್ಷೇತ್ರಯಾತ್ರೆಗೆ ಬರುವವರೇ ಧನ್ಯರು ಇಲ್ಲಿಗೆ ಬಂದು

ಕ್ಷೇತ್ರಾಧಿದೇವತೆಯಾದ ಶ್ರೀ ಲಕ್ಷ್ಮೀ ನರಸಿಂಹನನ್ನು, ಶ್ರೀ ಷೋಡಶಬಾಹು ನರಸಿಂಹದೇವರನ್ನು, ಶ್ರೀ ಲಕ್ಷ್ಮೀ ವೆಂಕಟೇಶ ದೇವರನ್ನು, ವೃಕ್ಷದ ಮೂಲದಿಂದಲೂ ಶಾಖೋಪಶಾಖೆ ಗಳಿಂಲೂ ಆಗಾಗ್ಗೆ ಸ್ವಯಂ ವ್ಯಕ್ತವಾಗಿ ಉದರಿದ ಶಾಲಿಗ್ರಾಮಗಳನ್ನು ಸಂದರ್ಶಿಸಿ ಸೇವಾ ಸೂತ್ರಾದಿಗಳನ್ನು ಮಾಡುವವರಂತೂ ಪರಮ ಧನ್ಯರು.

---

1) ತತೋ ದೇವಹ್ರದೇ ರಮ್ಯೇ । ಬ್ರಹ್ಮಚಾರೀ ಸಮಾಹಿತಃ
ತ್ರಿರಾತ್ರ ಮುಷಿತಃ ಸ್ನಾತ್ವಾ । ಅಶ್ವಮೇಧ ಫಲಂ ಲಭೇತ್
ತತೋ ದೇವ ಹ್ರದೇ ರಮ್ಯೇ ಕೃಷ್ಣವೇಣಿ ಜಲೋದ್ಭವೇ
ಜಾತಿಸ್ಮರ ಹ್ರದೇ ಸ್ನಾತ್ವಾ । ಭವೇ ಜ್ಜಾತಿಸ್ಮರೋ ಹ್ರದಃ ॥
-ಮಹಾಭಾರತ. ಆದಿಪರ್ವ. 85/37-ಭೀಷ್ಮ ''9/20
ಗುರುಂ ಕನ್ಯಾಗತಂ ಧನ್ಯಾ ।ಯಾ ಪುರಸ್ಕೃತ್ಯ ಸೇವಸೇ
ಶ್ರೀ ಕೃಷ್ಣವೇಣಿ ಪಾಪಾನಿ । ಸ್ನಾತಂ ಪುಣ್ಯ ಯಸಿ ಧ್ರುವಂ ॥(ಶ್ಲೋ.2)
ಕಿಂ ವರ್ಣಯಾಮಿ ಹೇ ಕೃಷ್ಣೇ । ತ್ವಯಿ ಕೃಷ್ಣಸ್ಯ ಸನ್ನಿಧಿಂ ।
ಯತ್ಸಮಸ್ತ ಪದೋಕಾತ್ತು । ಪುಂ ಭಾವ ಮವಲಂಬಸೇ ॥ (ಶ್ಲೋ.3)
ಶ್ರೀ ಕೃಷ್ಣವೇಣಿ ಕಲ್ಯಾಣಿ । ಯಾ ಚೇತ್ವಾಮಹ ಮನ್ವಹಂ ।
ಶ್ರೀ ಕೃಷ್ಣ ಚರಣಾಂ ಭೋಜೇ । ಭಕ್ತಿಂ ಭಕ್ತ ಭವಚ್ಛದಿ ॥ (ಶ್ಲೋ.6)

ಹೀಗೆ ಸಾಧನ ಮಾಡುವ ಸಾರ್ಥಕ ಜೀವಿಗಳಿಗೆ ಸಂತೋಷವಾಗಲೆಂದು ಈ
ಕೊಪ್ಪರ ಕ್ಷೇತ್ರದ ಪರಿಚಯಾತ್ಮಕ ಲೇಖನವನ್ನು ಬರೆದಿರುತ್ತೇವೆ.
ಸಜ್ಜನರ ಕೃಪೆಯಿರಬೇಕೆಂದು ಪ್ರಾರ್ಥಿಸುವ,

2) ನಮಾಮಿ ಸುಕೃತ ಶ್ರೇಣಿಂ । ಕೃಷ್ಣ ವೇಣಿಂ ತರಂಗಿಣೀಂ ।
ಯದ್ವೀಕ್ಷಣಂ ಕೋಟಿ ಜನ್ಮ । ಕೃತ ದುಷ್ಕರ್ಮ ಶಿಕ್ಷಣಂ ॥
(ತೀಥಪ್ರಬಂಧ)

ಶ್ರೀ ಗುರುರಾಜಪ್ರಿಯಶೀಘ್ರಕವಿ
ಪಂಡಿತ ಚಿಕ್ಕೇರೂರು ಗೋವಿಂದಾಚಾರ್ಯಃ
ಹರಪನಹಳ್ಳಿ.

॥ ಶ್ರೀ ಲಕ್ಷ್ಮೀ ನೃಸಿಂಹೋ ವಿಜಯತೇ ॥

ಶ್ರೀ ಕಾರ್ಪರಕ್ಷೇತ್ರಗತ ನರಸಿಂಹ ಸುಪ್ರಭಾತಂ

-ರಚಕ : ರಾಘವೇಂದ್ರಾಚಾರ್ಯಃ

ಗುಡೇಬಲ್ಲೂರು

ಶ್ರೀ ವಾರಿಜೋದ್ಭವ ಮುಖಾಮರ ಪೂಜಿತಾಂಘ್ರೇ ।
ಲಕ್ಷ್ಮೀನಿವಾಸ ಶುಭ ಲಕ್ಷಣ ಲಕ್ಷಿತಾಂಗ ॥
ವೇದೈಕ ಗಮ್ಯ ಮಹಿಮಾನ್ವಿತ ಲೋಕಪಾಲ ॥
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 1 ॥

ಸ್ವಾಮಿನ್ ಹಿರಣ್ಯಕಶಿಪು ಃ ಕುಪಿತೋಸ್ವಮುಷ್ಟ್ಯಾ ।
ಸ್ತಂಭಂ ಪ್ರಘಟಯದತಃ ಪ್ರಕಟೋ ಸಿಭೂಮನ್ ॥
ಪ್ರಹ್ಲಾದ ವಾಕ್ಯ ಮನುಸೃತ್ಯ ನಿಜಂ ವಿಧಾತುಂ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 2 ॥

ಗಂಭೀರ ರೂಪ ಘನ ಘೋಷ ಯುತೋಗ್ರ ಮೂರ್ತೇ ।
ವಿದ್ಯುತ್ಪ್ರ ಭಾಚಯ ತಿರಸ್ಕೃತ ದಂಷ್ಟ್ರ ಯುಗ್ಮ ॥
ಅಗ್ನಿ ಸ್ಫುಲಿಂಗ ನಯನಾಯತ ರಕ್ತಜಿಹ್ವ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 3 ॥

ದೈತ್ಯೋದರಂ ನಖಚಯೈಃ ಪ್ರವಿದೀರ್ಯ ರಕ್ತಂ ।
ಸಿಂಚನ್ ಭುವಿ ಪ್ರಖರ ತೇಜ ಕೃತಟ್ಟಹಾಸ ॥
ವಜ್ರೋಪಮಾನ ನಖ ಕರ್ಕಶ ಕೇಶರಾಢ್ಯ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 4॥

ಶ್ರೀ ಕಾರ್ಪರಾಟವಿ ತಲೇ ವರ ಕಾರ್ಪರಾಖ್ಯ ।
ಮೌನಿ ಕೃತೇನ ತಪಸಾ ಪರಿತುಷ್ಟಚಿತ್ತ ॥
ದಾತಾಸಿ ಕಾಂಕ್ಷಿತ ವರಾನ್ ತರು ಪಿಪ್ಪಲಸ್ಥ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 5 ॥

ಕೃಷ್ಣಾನದೀಶ ಮನ ದಿಗ್ಗತ ತೀರವರ್ತೀ ।
ಕ್ಷೇತ್ರ ಸ್ಥಿತಾತ್ಮ ಭಜಕಾಮರ ಧೇನುದೇವ ॥
ಶ್ರೀ ವೇಂಕಟೇಶಯುತ ಚಿತ್ಸುಖ ಪೂರ್ಣ ದೇಹ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 6 ॥

ತತ್ಪಶ್ಚಿಮೇ ದಿಶಿಲಸದ್ವಯ ಕ್ರೋಶದೂರೇ ।
ಶ್ರೀ ಶ್ವೇತ ಶೃಂಗಿ ನಿಲಯೇ ವರ ಕೇಶವೋಸಿ ॥
ಕಷ್ಣಾಸರಿ ದ್ವಿಲಸದುತ್ತರ ವಾಹಿನೀಸ್ಥೇ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 7 ॥

ಪೂರ್ವೇ ದಿಶಿಪ್ರಥಿತ ನಾಮ ಯುತೇಸು ಗೂಗಲ್ ।
ಗ್ರಾಮೇ ಸರಿತ್ತಟತೇ ಪ್ರಭುರಾಯ ಲಿಂಗೇ ॥
ಅಂತರ್ಹಿತೋಸಿ ನರಸಿಂಹ ಹರೇಗುಹಾಯಾಂ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 8 ॥

ನಾರಪ್ಪ ಭೂಸುರ ವರಂ ಜಡಭೂತ ಮರ್ತ್ಯಂ ।
ಮತ್ವಾ ನದೀಜಲ ತಲೇ ಪತಯುತ ಶಿಷ್ಯಾಃ ॥
ತಿರ್ತ್ವಾ ನದೀತಟ ಮಗಾದ್ಯದ ನುಗ್ರಹೇಣ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 9 ॥

ವಿಪ್ರೋಹಿ ಶೈಲ ಮುಪಗಮ್ಯ ಸುನಿದ್ರಿತೇಚ ।
ಸ್ವಪ್ನೇ ಬ್ರವೀನ್ನಮ ಮದರ್ಶನ ಕರ್ತುಮರ್ಹಃ ॥
ತತ್ರೈವ ಗಚ್ಚನಿವಸಾಮಿಸದೇತಿ ಬ್ರೂಯಾತ್ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 10 ॥

ಧೇನರ್ಭವಾಮಿ ತವ ಪೃಷ್ಟಗತೋನನುಯಾಮಿ ।
ಧಾರಾಪಯಃ ಸತತಮಧ್ವನಿ ಸೇಚಯಾರ್ಪ ॥
ಸತ್ಕಾರರ್ಪರ ಸ್ಥಿತ ಸುಪಿಪ್ಪಲ ಗೋವಸಾಮಿ ॥
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 12 ॥

ಇತ್ಥಂ ನಿಶಮ್ಯ ವಿಬುಧೋಗಮತಿಸ್ಮ ಪೃಷ್ಟೇ ।
ಗೋವೃಂದ ಮಾಗಮದತಃ ಕುಕ್ಕ್ಯಳ್ಳಿ ಗ್ರಾಮೇ ॥
ಗೋ ದ್ವಂದ್ವ ರೂಪಮನವೇಕ್ಷ್ಯ ತದಾಪ ವಿಪ್ರೋ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 12 ॥

ವಿಪ್ರಃ ಪ್ರಪಶ್ಯ ದನುಮಾನಯುತಃ ಸ್ವಪೃಷ್ಟೇ ।
ಗೌಃ ಸಿಂಚಯನ್ನಹತಿ ಪ್ರಸ್ತರಿ ದುಗ್ದಧಾರಂ ॥
ತಸ್ಮಿನ್ ದದರ್ಶಸತದಾವರ ವೇಂಕಟೇಶಂ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 13 ॥

ಪಶ್ಯನ್ ಸುಪಿಪ್ಪಲತರೌವರ ದುಗ್ದಧಾರಂ ।
ಶ್ರೀ ಶ್ರೀನಿವಾಸಮಿಹ ಸನ್ನಿಹಿತಂ ಚಮತ್ವಾ ॥
ನಿತ್ಯಾರ್ಚನೇನ ಭಗವಂತ ಮತೋಷಯತ್ಸಃ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 14 ॥

ಸಂಲಿಖ್ಯಪ್ರಾಣಪತಿಮಶ್ಮನಿ ಭೂಮಿ ದೇವೋ ।
ಪ್ಯಂಗಾರತೋ ಹ್ಯುಪದಿಶದ್ಬಹು ಗೋಪಕೇಭ್ಯಃ ॥
ಯುಷ್ಮಾಕ ವಷ್ಟದಮಿಮಂ ಭಜತಾಂ ಸದೇತಿ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 15 ॥

ಧಾತ್ರ್ಯಾಂ ಸ್ವಸೈನ್ಯ ಗಣಯುಕ್ತ ವಿಜಾಪುರೇಶ ।
ಶ್ಚೆನ್ನೂರು ಗ್ರಾಮನಿಕಟೇ ಖಲು ಪ್ರಸ್ಥಿತೋತ್ರ ॥
ರಾತ್ರೌ ಭಯೇನ ಪರಿಕಂಪಯದಸ್ಯ ಸೈನ್ಯಂ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 16 ॥

ಶ್ರೀ ನಾರಸಿಂಹ ಮಹಿಮಾಂ ಸುಜನಾನಿವೇದ್ಯ ।
ಭೂಪಾಯ ಪಿಪ್ಪಲತರುಂ ಪ್ರದರ್ಶಯನ್ ತತ್ ॥
ರಾತ್ರೌ ದ್ವಿತೀಯ ದಿವಸೇ ಪ್ರವದತ್ಸ್ವಪ್ನೇ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 17 ॥

ಮನ್ಮಂದಿರಂ ವಿರಚಯಾತ್ರ ನದೀ ತಟೀತ್ವಂ ।
ಪುತ್ರೋ ಭವತ್ಯನು ಪಮುಸ್ತುತವ ಪ್ರಜೇಶ ॥
ಇತ್ಥಂ ವದನ್ನರ ಹರಿರ್ವಟು ರೂಪಧಾರೀ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 18 ॥

ಭೂಪೋ ನಶಮ್ಯ ಮಹತೀಂ ವರ ವೇದಿಕಾಂಚ ।
ಸನ್ಮಂಟಪಂ ಗಿರಿಶನಂದಿ ಸುಮಂದಿರಾಣಿ ॥
ನಿರ್ಮಾಯ ಭೂಮಿಮದ ದಾತ್ಸುಜನಾಗ್ರಗಣ್ಯೋ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥19॥

ಅಶ್ವತ್ಥರಾಜ ತರುಮಧ್ಯಗತಾಶ್ಚ ಶಾಲ ।
ಗ್ರಾಮಾಃ ಪತಂತಿ ಹಿಕದಾಪಿ ವಿಚಿತ್ರಮೇ ತತ್ ॥
ಭೂದೇವ ವರ್ಯಗಿರಿಯಾರ್ಯ ಕರಾಬ್ಜ ಪೂಜ್ಯಃ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 20 ॥

ವೃಕ್ಷಾದ್ದ್ವಿ ಷಟ್ಕರಯುತಃ ಸಕಲಾಯುಧಾಢ್ಯೋ ।
ಹ್ಯಾವಿರ್ಬಭೂವ ನೃಹರಿರ್ಮಧುಮಾಸ ಶುಕ್ಲೇ ॥
ಸ ದ್ವಾದಶೀ ಶುಭದಿನೇ ತಪನಾಸ್ತ ಕಾಲೇ ।
ಶ್ರೀ ಕಾರ್ಪರ ನೃಹರೇ ತವ ಸುಪ್ರಭಾತಂ ॥ 21 ॥

ಅತ್ರೈ ಕದಾಯತಿವರಾನ್ ರಘುನಾಥ ತೀರ್ಥ ಃ ।
ಸಂವೀಕ್ಷ್ಯ ದೇವ ಸಮುಖೇ ವಿಬುಧೇಂದ್ರ ತೀರ್ಥಾ ಃ ॥
ಮಚ್ಛಿಷ್ಯ ಸಮೀಕ್ಷಯ ಪರಿಚಯ ಇತ್ಯುವಾಚ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 22 ॥

ಗುರ್ವಾಜ್ಞ ಯಾಕೃತಮಮೋಘ ಸುಧಾನುವಾದಂ ।
ಶೃತ್ವಾ ಪ್ರಹೃಷ್ಟಹೃದಯಾ ರಘುನಾಥ ತೀರ್ಥ ಃ ॥
ಶ್ರೀ ಪಾದರಾಜ ಇತಿ ತಸ್ಯ ಪ್ರಥಾಂ ಪ್ರಚಕ್ರೇ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 23 ॥

ಅತ್ರೈ ವ ಬಾಹ್ಯವಲಯೇ ತಪಮಾಚರಸನ್ ।
ಪೂರ್ವಂ ಜನಾರ್ದನ ಸುನಾಮಕ ಯೋಗಿವರ್ಯ ಃ ॥
ಶ್ರೀ ಮನ್ನೃ ಸಿಂಹ ಕೃಪಯೇ ಹನಿವಾಸಕೋ ಭೂ ।
ಚ್ಛ್ರೀಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 24 ॥

ಅತ್ರೇಭರಾಮಪುರ ಗ್ರಾಮ ನಿಮಸಿ ಕೃಷ್ಣಾ ।
ಚಾರ್ಯೋನುಕಂಪ ಸಹಿತೋಖಿಲ ಸಜ್ಜನಾನಾಂ ॥
ಸತ್ಕಾಮಿತಾರ್ಥ ಮದದಾತ್ಪಣಿ ರೂಪಧಾರೀ ।
ಶ್ರೀ ಕಾರ್ಪರೇಶ ನೃ ಹರೇ ತವ ಸುಪ್ರಭಾತಂ ॥ 25 ॥

ಕನ್ಯಾಗತೇ ಸುರಪುರಾದ್ಗುರು ವಿಠ್ಠಲಾರ್ಯಾ ।
ತ್ರ್ಯಾಗತ್ಯವತ್ಸರ ಮಿತಂ ಚ ಸುಧಾದಿ ಪಾಠಂ ॥
ಕೃತ್ವಾ ನೃಸಿಂಹ ಕರುಣಾಮಲಭನ್ಮುಮೋದ ।
ಶ್ರೀ ಕಾರ್ಪರೇಶ ನೃಹರೇ ತವ ಸುಪ್ರಭಾತಂ ॥ 26 ॥

ಇತ್ಥಂ ನೃ ಸಿಂಹ ಶುಭದಾಯಕ ಸುಪ್ರಭಾತಂ ।
ಯೇ ಮಾನವಾ ಃ ಪ್ರತಿದಿನಂತು ಪಠಂತಿ ಭಕ್ತ್ಯಾ ॥
ತೇಷಾಂ ಮಹಾದುರಿತನಾಶನ ಮತ್ಯುದಾರಂ ।
ಸತ್ಪುತ್ರ ಬಾಂಧವ ಕಳತ್ರ ಸುಖಪ್ರದಾನಂ ॥ 27 ॥

ಶ್ರೀ ಗುಂಡಿಲಾಪುರ ವರಸ್ಥಿತ ರಾಘುವೇನ ।
ಭಕ್ತ್ಯಾ ಕೃತಂ ಮನುಜ ಕೇಸರಿ ಸುಪ್ರಭಾತಂ ॥
ಶ್ರೀ ಭಾರತೀಶ ಹೃದಯಾಂಬುಜವಾಸಿ ನಾರ ।
ಸಿಂಹ ಃ ಪ್ರಸೀದತು ಸದಾ ಕೃತಿನಾಮುಯಾವೈ ॥ 28 ॥

ಶ್ರೀ ಮಧ್ವೇಶಾರ್ಪಣಮಸ್ತು

ಶ್ರೀ ಲಕ್ಷ್ಮೀ ನರಸಿಂಹೋ ವಿಜಯತೇ
ಶ್ರೀ ಅಶ್ವತ್ಥನರಸಿಂಹಃ ಪ್ರಸೀದತು

ಶ್ರೀ ಮತ್ಪಿಪ್ಪಲನಾರಸಿಂಹ ಭಗವಾನ್ ಶ್ರೀ ವೆಂಕಟೇಶ ಪ್ರಭು
ಕೃಷ್ಣಾಚೋತ್ತರ ವಾಹಿನೇ ವೃಷಭರಾಡ್ರೂಪೀ ಜಯಾರ್ಯಃ ಶಿವಃ
ಶ್ರೀ ಮತ್ಯಯುರ್ಷಿತಾನ್ನ ಭುಗ್ಯತಿ ವರಃ ಕ್ಷೇತ್ರಸ್ಥದೇವಾ ಇಮೇ
ಕೊಪ್ಪರಕ್ಷೇತ್ರವತಾಃ ಶುಭಕರಾ ಕುರ್ವಂತುವೋ ಮಂಗಳಂ

ಚಿಕ್ಕೇರೂರು ಗೋವಿಂದಾಚಾರ್ಯ

ಶ್ರೀ ಮಂತವಾದ ಭಾರತ ಭೂರಮಣಿಯು ಕರ್ಮಭೂಮಿ 1 ಎಂದು ಪುರಾಣ ಪ್ರಸಿದ್ಧವಿದೆ. ಈ ರಮಣಿಯ ಆಭರಣಗಳಂತೆ ಲೋಕ ಪ್ರಸಿದ್ಧವಾದ ಅನೇಕ ಪುಣ್ಯ ಕ್ಷೇತ್ರಗಳಿವೆ. ಅವುಗಳಲ್ಲಿ ಶ್ರೀ ಕಾರ್ಪರ (ಕೊಪ್ಪರ) ಕ್ಷೇತ್ರವೂ ಒಂದು. ಈ ಕ್ಷೇತ್ರವು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಿಂದ 12 ಕಿ.ಮಿ. ದೂರದಲ್ಲಿ ಇರುತ್ತದೆ. ಈ ಕ್ಷೇತ್ರಕ್ಕೆ ಬರಬೇಕಾದರೆ ದೇವದುರ್ಗದಲ್ಲಿ ಇಳಿದು ಬರಬೇಕಾಗುತ್ತದೆ. ದೇವದುರ್ಗವು ರಾಯಚೂರು - ಗುಲಬರ್ಗಾ ಮಾರ್ಗದಲ್ಲಿ ಇರುತ್ತದೆ. ರಾಯಚೂರಿನಿಂದ ಸಾಯಂಕಾಲ ಕೊಪ್ಪರಕ್ಕೆ ನೇರವಾಗಿ ಒಂದು ಬಸ್ಸು ಇರುತ್ತದೆ.

ಪೌರಾಣಿಕ ಹಿನ್ನಲೆ :

ಸುಮಾರು ಐದು ಸಾವಿರ ವರ್ಷಗಳ ಹಿಂದೆ ಶ್ರೀ ವೇದವ್ಯಾಸರು ಮಹಾ ಭಾರತವನ್ನೂ, ಸ್ವಲ್ಪ ಕಾಲಾನಂತರ ಹದಿನೆಂಟು ಪುರಾಣಗಳನ್ನು ರಚಿಸಿದರು. ಪುರಾಣಗಳಲ್ಲಿ ಒಂದಾದ ಸ್ಕಂದ ಪುರಾಣದಲ್ಲಿ ಶ್ರೀ ವೇದವ್ಯಾಸರು ಒಂದು ಶ್ಲೋಕದಲ್ಲಿ ಈ ಕೊಪ್ಪರ ಕ್ಷೇತ್ರವನ್ನು ಹೀಗೆ ಉಲ್ಲೇಖಿಸಿದ್ದಾರೆ.

'' ಕೃಷ್ಣವೇಣೀ ತೀರ ಸಂಸ್ಥಂ
ಕಾರ್ಪರ ಗ್ರಾಮ ವಾಸಿನಂ
ತತ್ತೀರೇ ಪಿಪ್ಪಲಸ್ಥಂ
ಶ್ರೀ ನೃಸಿಂಹಂ ಮನಸಾ ನಮೇ ''

1) ಕರ್ಮಭೂಮಿರಿಯಂ ರಾಜನ್ । ಸರ್ವೇನ್ಯೇ ಭೋಗಭೂಮಯ :
ಕರ್ಮಭೂಮಿರಿಯಂ ರಾಜನ್ । ಫಲಭೂಮಿರ ಸೌ ಮ ತಾ ॥
- ವಿಷ್ಣು ಪುರಾಣ ಶ್ರೀ ಮನ್ಮಹಾಭಾರತ 3-361-25

ಕೃಷ್ಣವೇಣೀ ತೀರದಲ್ಲಿ ನೆಲಸಿರುವವನೂ, ಕಾರ್ಪರ ಗ್ರಾಮವಾಸಿಯೂ, ತೀರದಲ್ಲಿರುವ ಪಿಪ್ಪಲ ವೃಕ್ಷದಲ್ಲಿ ಇರುವವನೂ ಆದ ಶ್ರೀ ನರಿಸಿಂಹನಿಗೆ ಮನಃಪೂರ್ವಕ ವಂದಿಸುತ್ತೇನೆ.

ಇದಲ್ಲದೆ ಸ್ಕಂದ ಪುರಾಣದಲ್ಲಿ ಕಾರ್ಪರ ಕ್ಷೇತ್ರ ಮಹಿಮೆಯು ಇನ್ನೂ ವಿವರವಾಗಿ ಬರುತ್ತದೆ. ಕೃಷ್ಣಾನದಿ ತೀರದಲ್ಲಿ ಕಾರ್ಪರಾರಣ್ಯವೆಂಬ ಕ್ಷೇತ್ರ ಪ್ರದೇಶವಿದೆ. ಈ ಪ್ರದೇಶದಲ್ಲಿ ಒಂದು ಕಡೆ ಸಪ್ತ ಋಷಿಗಳು ತಪೋನಿರತರಾಗಿದ್ದರು. ಅವರ ಆಶ್ರಮವು ಪವಿತ್ರವಾದದ್ದು, ಅಲ್ಲಿ ಸ್ನಾನ ದಾನಾದಿಗಳನ್ನು ಮಾಡುವವರಿಗೆ ಸಕಲಾಭೀಷ್ಟಪ್ರದವಾದ ಜ್ಞಾನೋದಯವೇ ಆಗುವದು. ಆ ಕ್ಷೇತ್ರದಿಂದ ಪೂರ್ವಕ್ಕೆ

ಸಪ್ತಋಷಿಗಳಲ್ಲಿ ಒಬ್ಬರಾದ ಶ್ರೀ ವಿಶ್ವಾಮಿತ್ರರು ಪ್ರಯಾಣ ಮಾಡಿ ಅಲ್ಲಿಯ ಸ್ಥಳೀಯ ಋಷಿಗಳಿಂದ ಆವೃತರಾಗಿ ಅಲ್ಲೇ ತಪೋನಿರತರಾದರು. ಶ್ರೀ ವಿಶ್ವಾಮಿತ್ರರ ತಪಸ್ಸಿಗೆ ತೃಪ್ತಳಾಗಿ ಸಾಕ್ಷಾತ್ ಶ್ರೀ ಕೃಷ್ಣವೇಣೀ ನದಿಯು ಸ್ವರೂಪತ : ಅಂದರೆ ಮೂರ್ತಿಮತಳಾಗಿ ''ಓ! ವಿಶ್ವಾಮಿತ್ರರೇ ! ನಿಮ್ಮ ತಪಸ್ಸಿಗೆ ನಾನು ಬಹು ಸಂತುಷ್ಟಳಾಗಿದ್ದೇನೆಂದು ನುಡಿದಳು.

ಆಗ ವಿಶ್ವಾಮಿತ್ರ ಋಷಿಗಳು ಅತ್ಯಾನಂದದಿಂದ ಹೀಗೆ ಸ್ತೋತ್ರ ಮಾಡಿದರು '' ದೇವೀ ! ನೀನು ಸಕಲ ಪಾಪ ವಿಧ್ವಂಸಿನಿಯೂ, ಸಂಸಾರ ಭಯವಿಮೋಚನಿಯೂ ಆಗಿರುವೆ, ನಿನ್ನನ್ನು ಸ್ತೋತ್ರ ಮಾಡುವ ಯೋಗ್ಯತೆಯನ್ನು ನನಗಿತ್ತು ರಕ್ಷಿಸುನೀನು ಸಮಸ್ತ ದೇವತೆಗಳ ಭಾಗ್ಯ ಸ್ವರೂಪಿಣಿಯು, ಸಿದ್ಧಿಗಳಲ್ಲಿ ಮನೋರಥ ರೂಪಿಣಿಯೂ, ಅನಂತ ಪಾಪಗಳನ್ನು ಮತ್ತು ದು:ಖಗಳ ಮಡುವನ್ನೇ ನಾಶಗೈದು ಭಕ್ತರನ್ನು ಪರಿಪಾಲಿಸುವ ದೇವಿಯು. ನೀನು ನಿನ್ನ ಸಾಮರ್ಥ್ಯದಿಂದ ಕೇವಲ ಸಮುದ್ರವನ್ನು ಮಾತ್ರ ತುಂಬುವ ದೇವಿಯಲ್ಲದೇ ಭಕ್ತರ ಆಪೇಕ್ಷೆಗಳನ್ನು ಪೂರೈಸುವ ಶಕ್ತಿಯಾಗಿರುವಿ. ಅಂತಹ ನಿನ್ನನ್ನು ಸಾಕಲ್ಯೇನ ಯಾರು ಸ್ತುತಿಸಬಲ್ಲರು ನಿನ್ನ ಅನುಗ್ರಹಾಭಿಲಾಷಿಗಳು ನಿನ್ನ ಜಲದಲ್ಲಿ ಸ್ನಾನ ಮಾತ್ರದಿಂದಲೇ ಕೃತಾರ್ಥರಾಗುವರು. ದೇಶಾಂತರದಲ್ಲಿದ್ದಾಗಲೂ ನಿನ್ನನ್ನು ಭಕ್ತಿಯಿಂದ ಸ್ತೋತ್ರ ಮಾಡಿದರೆ ಅವರ ಇಷ್ಟಾರ್ಥ ಸಿದ್ಧಿಸುವವು, ಅಂದ ಮೇಲೆ ನಿನ್ನ ಸಾಕ್ಷಾದ್ದರ್ಶನ ನಿನ್ನ ಜಲದಲ್ಲಿ ಸ್ನಾನ ಪಾನಾದಿಗಳನ್ನು ಮಾಡಿದವರಿಗೆ ಎಷ್ಟು ಫಲಪ್ರಾಪ್ತಿಯಾಗುವದೆಂದು ವರ್ಣಿಸಲು ಸಾಧ್ಯವೆ ? ತಾಯಿ ! ನಿನ್ನ ತೀರದಲ್ಲಿರುವ ಮೃಗ ಪಕ್ಷಿ ಗಳೆ ಧನ್ಯಜೀವಿಗಳೆಂದ ಮೇಲೆ ಮಾನವರು ಧನ್ಯರೆಂದು ಬೇರೆ ಹೇಳಬೇಕಾಗಿಲ್ಲ. ದೇವಿ ನನಗೆ ಎಷ್ಟು ಜನ್ಮಗಳು ಬಂದರೂ ನಿನ್ನ ತೀರದಲ್ಲಿರುವ ದೇಶದಲ್ಲೇ ಜನ್ಮ ಲಭಿಸಲಿ ಹೇ ರಮೇ ! ಈಡ್ಯೇ ! ನಮ್ಮನ್ನು ಪವಿತ್ರರನ್ನಾಗಿ ಮಾಡು. ನಿನ್ನ ಪ್ರವಾಹದಲ್ಲಿ ಸ್ನಾನ ಮಾತ್ರೇಣ ಉತ್ತಮ ಲೋಕಗಳು ಲಭಿಸುವವು'' ಎಂದು ಸ್ತೋತ್ರ ಮಾಡಿದರು. ಸ್ತೋತ್ರ ಸಂತುಷ್ಟಳಾದ ಶ್ರೀ ಕೃಷ್ಣವೇಣಿಯು ನಿನಗೆ ಏನು ವರ ಬೇಕೋ ಕೇಳೆಂದಳು, ಆಗ ವಿಶ್ವಾಮಿತ್ರರು ಎದ್ದು ನಿಂತು '' ತಾಯಿ ನನಗೆ ಮತ್ತೇನೂ ಬೇಡ ಮುಕ್ತಿ ಲಭಿಸುವಂತೆ (1) ಅನುಗ್ರಹಿಸೆಂದು ಬೇಡಿದರು.

ಮತ್ತು '' ನಮ್ಮ ಈ ಸಂವಾದವನ್ನು, ನನ್ನಿಂದ ಕೃತವಾದ ಈ ಸ್ತೋತ್ರವನ್ನು ಶ್ರವಣ ಪಠನಾದಿಗಳನ್ನು ಯಾರು ಮಾಡುವರೋ ಅವರು ಕೂಡಾ ದುರ್ಲಭವಾದ ಮೋಕ್ಷಾದಿ ಪುರುಷಾರ್ಥಭಾಗಿಗಳಾಗುವರು ''. ಎಂದು ಹೇಳಿದರು.

ಇದಾದ ನಂತರ ಶ್ರೀ ವಿಶ್ವಾಮಿತ್ರರು ಆ ಸ್ಥಳದಿಂದ ಮುಂದೆ ಹೋಗಿ ಅಲ್ಲಿ ವನದಲ್ಲಿ ಬಹುಕಾಲ ವಾಸಾವಾಗಿದ್ದರು. ಆ ಸ್ಥಳದಲ್ಲಿರುವ ತೀರ್ಥಕ್ಕೆ '' ವಿಶ್ವಾಮಿತ್ರ ತೀರ್ಥ '' ವೆಂದೇ ನಾಮ ಪ್ರಾಪ್ತವಾಯಿತು.

---

1) ವಿಷ್ಣುರ್ಹಿ ದಾತಾ ಮೋಕ್ಷಸ್ಯ ! ವಾಯುಶ್ಚ ತದನುಜ್ಞಯಾ ॥ತಾ॥ನಿ॥1/08 ಮೋಕ್ಷಂ ಚ ವಿಷ್ಣುತಸ್ತ್ವೇವ ॥ತಾ॥ನಿ॥ 1/82.

ಇತ್ಯಾದಿ ಪ್ರಮಾಣ ಪರ್ಯಾಲೋಚನೆಯೂ ಮೋಕ್ಷ ಕೊಡುವುದು ಕೇವಲ ಶ್ರೀ ವಿಷ್ಣೈಕನಿಷ್ಟ ಧರ್ಮವು, ಇತರರು '' ಮೋಕ್ಷ ಕೊಡುವುದು '' ಎಂದರೆ ಮುಕ್ತಿಗೆ ಅನುಕೂಲವಾದ ಮಾರ್ಗವನ್ನು ತೋರಿ ಸಾಧನೆಗೆ ಅನುಕೂಲಮಾಡಿಕೊಡುವುದು ಮಾತ್ರವೇ ಎಂದು ತಿಳಿಯಬೇಕು.

ಶ್ರೀ ಕಾರ್ಪರ ಕ್ಷೇತ್ರ ಮಹಿಮೆ

ಸಾವಿರಾರು ವರ್ಷಗಳ ಹಿಂದೆ ಕೃಷ್ಣಾ ನದಿ ತೀರದಲ್ಲಿ ಕಾರ್ಪರ ಮಹಾಋಷಿಗಳು ಬಹು ಕಾಲದಿಂದಲೂ ತಪೋನಿರತರಾಗಿದ್ದರು. ಅವರ ತಪಸ್ಸಿಗೆ ಸಂತುಷ್ಟನಾಗಿ ಶ್ರೀ ಲಕ್ಷ್ಮೀನಾರಾಯಣನು ಅಶ್ವತ್ಥ ನಾರಸಿಂಹನ ರೂಪದಿಂದ ನದಿಯ ಅಂಚಿನಲ್ಲಿಯೇ ಪ್ರತ್ಯಕ್ಷನಾದನು. ಅಂದಿನಿಂದಲೂ ಆ ಸ್ಥಳದಲ್ಲಿಯೇ ಶಾಶ್ವತವಾಗಿ ಅಶ್ವತ್ಥ ವೃಕ್ಷ ರೂಪದಲ್ಲಿ ನೆಲಸಿದಾನೆ. ತನ್ನನ್ನು ಸೇವಿಸುವ ಭಕ್ತರ ಮನೋಭೀಷ್ಟಗಳನ್ನು ನೆರವೇರಿಸುತ್ತಿದ್ದಾನೆ. ಇಂತಹ ಕ್ಷೇತ್ರದಲ್ಲಿ ''ಕನ್ಯಾಗತ''ದ ಕಾಲದಲ್ಲಿ ಯಾರು ಇಲ್ಲಿಗೆ ಬಂದು ಸ್ನಾನ, ದಾನ, ಪೂಜಾದಿಗಳನ್ನು ಪಿತೃ ಕಾರ್ಯಗಳನ್ನು ನೆರವೇರಿಸುವರೋ ಅವರೇ ಧನ್ಯರು. ಕರ್ಕಾಟಕ ಸಂಕ್ರಮಣವು ಬಂದಾಗ ಕೃಷ್ಣಾನದಿಯಲ್ಲಿ ಸ್ನಾನ ಮಾಡಿ ಅಶ್ವತ್ಥನಾರಸಿಂಹನನ್ನು ಸೇವಿಸಿದವರಿಗೆ ಅನಂತ ಸೌಭಾಗ್ಯವು ಲಭಿಸುತ್ತದೆ. ಈ ಕ್ಷೇತ್ರಕ್ಕೆ ಬ್ರಹ್ಮ, ರುದ್ರ, ಇಂದ್ರಾದಿ ದೇವತೆಗಳು ದಯಮಾಡಿಸಿ ಶ್ರೀ ಅಶ್ವತ್ಥನಾರಸಿಂಹನ ಪೂಜೆಯನ್ನು ಮಾಡುವರು.

ಭಾರತ ಭೂಮಿಯಲ್ಲಿಯೇ ವಿಶಿಷ್ಟವಾಗಿ ಅಶ್ವತ್ಥ ವೃಕ್ಷದಲ್ಲಿ 1 ಕಾಣಿಸಿಕೊಂಡು ನೆಲೆಸಿರುವ ಶ್ರೀ ನರಸಿಂಹ ಸ್ವಾಮಿಯನ್ನು (ಚಿತ್ರ 1) ಮತ್ತು ಈ ಕ್ಷೇತ್ರದ ಮಹಾತ್ಮೆಯನ್ನು ಅರಿತು ಯಾರು ಭಕ್ತಿಯಿಂದ ಸೇವೆ ಸಲ್ಲಿಸುವರೋ, ಅವರು ಸರ್ವ ಪಾಪಗಳಿಂದಲೂ ಮುಕ್ತರಾಗಿ ಸಕಲ ಮನೋಭೀಷ್ಟಗಳನ್ನು ಪಡೆಯುವರು.

ಇದಿಷ್ಟು ಸ್ಕಂದ ಪುರಾಣದಲ್ಲಿ ದೊರೆಯುವ ಮಾಹಿತಿ. ಈ ಕ್ಷೇತ್ರಕ್ಕೆ ಪುರಾಣ ಪ್ರಸಿದ್ಧ ಮಹಾತ್ಮೆಯಲ್ಲದೆ ಚಾರಿತ್ರಿಕ ಮಹಿಮೆಯೂ ಇದೆ. ಇದಕ್ಕೆ ಸಂಬಂಧಿಸಿದಂತೆ ಅನೇಕ ಸಂಗತಿಗಳಿವೆ. ಅವನ್ನು ಒಂದೊಂದಾಗಿ ನೋಡಬಹುದು.

1) ಅಶ್ವತ್ಥರೂಪೀ ಭಗವಾನ್ ವಿಷ್ಣುರೇವ ನ ಸಂಶಯಃ ॥
(ಪದ್ಮೋತ್ತರ ಖಂಡ 16 ಅಧ್ಯಾಯ ಶ್ಲೋಕ 160)

ಮಹಾಂತ ನಾರಪ್ಪಯ್ಯನಿಗೊಲಿದ ವೆಂಕಟರಮಣ

ಶ್ರೀ ಅಶ್ವತ್ಥನಾರಸಿಂಹನಗರ್ಭಗುಡಿಯಲ್ಲಿ ಸ್ವಯಂವ್ಯಕ್ತ ಷೋಡಶಬಾಹು ನಾರಸಿಂಹನ ಸಾಲಿಗ್ರಾಮದ ಪಕ್ಕದಲ್ಲಿ ಸುಂದರವಾದ ವೆಂಕಟರಮಣನ ವಿಗ್ರಹವಿದೆ. ಇದನ್ನು ಕುರಿತು ಅತ್ಯಂತ ಜನಪ್ರಿಯವಾದ ಕಥೆಯೊಂದಿದೆ.

ಪೂರ್ವದಲ್ಲಿ ಈ ಕ್ಷೇತ್ರದಲ್ಲಿ ನೆಲೆಸಿದ್ದ ಬ್ರಾಹ್ಮಣರಲ್ಲಿ ನಾರಪ್ಪಯ್ಯನವರೆಂಬ ಮಹಾಂತರು ವಾಸವಾಗಿದ್ದರು. ಅವರು ಭಗವದ್ ಭಕ್ತರಾಗಿದ್ದರು. ಆದರೆ ಅವರ ಮಹಿಮೆಯನ್ನು ತಿಳಿಯದೆ ಅವರ ಅಣ್ಣತಮ್ಮಂದಿರು ದಡ್ಡನಾದ ಈತ ಬದುಕಿರುವುದಕ್ಕಿಂತ ನದಿಯಲ್ಲಿ ಬಿದ್ದು ಸಾಯುವುದೇ ಲೇಸು ಎಂದು ಭಾವಿಸಿದರು. ಅವರನ್ನು ಹೆಡಮುರಿಗೆ ಕಟ್ಟಿ ಕೃಷ್ಣಾನದಿಯಲ್ಲಿ ಎಸೆದುಬಿಟ್ಟರು. ಆದರೆ ದೈವಾನುಗ್ರಹದಿಂದ ಬದುಕುಳಿದ ನಾರಪ್ಪಯ್ಯನವರು ದಡ ಸೇರಿದರು. ದೃಢವಾದ ವೈರಾಗ್ಯದಿಂದ ತಿರುಪತಿಯ

ಶ್ರೀ ವೆಂಕಟರಮಣನ ದರ್ಶನವನ್ನು ಪಡೆಯಬೇಕೆಂದು ತಿರುಪತಿಗೆ ಬಂದು ಮುಟ್ಟಿದರು. ಅಲ್ಲಿ ಬೆಟ್ಟದ ಕೆಳಗೆ ಮಲಗಿದ್ದಾಗ ಸ್ವಪ್ನದಲ್ಲಿ ಶ್ರೀ ವೆಂಕಟೇಶನು ಕಾಣಿಸಿಕೊಂಡು '' ಮಹಾಂತರೇ, ಇಲ್ಲಿ ನಿಮಗೆ ನನ್ನ ದರ್ಶನ ಸಾಧ್ಯವಿಲ್ಲ. ನೀವು ಇರುವ ಸ್ಥಳವು ಅತ್ಯಂತ ಪುಣ್ಯಸ್ಥಳ, ನೀವು ಅಲ್ಲಿಗೇ ಹೋಗಿರಿ ನಾನು ನೀವಿದ್ದಲ್ಲಿಗೇ ಬಂದುದರ್ಶನ ಕೊಡುತ್ತೇನೆ. ನಿಮ್ಮ ಹಿಂದೆಯೇ ಗೋವಿನ ರೂಪದಲ್ಲಿ ಬರುತ್ತೇನೆ. ಕಾರ್ಪರಾರಣ್ಯದ ಅಶ್ವತ್ಥ ವೃಕ್ಷದ ಮೂಲದಲ್ಲಿ ಕ್ಷೀರಾಭಿಷೇಕವಾದಾಗ ಅಲ್ಲಿ ನನ್ನನು ನೀವು ಕಾಣಬಹುದು''. ಎಂದು ಸೂಚನೆಯನ್ನಿತ್ತನು. ಅದರಂತೆಯೇ ಆನಂದಭರಿತರಾದ ನಾರಪ್ಪಯ್ಯನವರು ಊರ ಕಡೆಗೆ ನಡೆದರು. ಅವರ ಹಿಂದೆಯೇ ಎರಡು ಆಕಳುಗಳು ಗೆಜ್ಜೆ ಸಪ್ಪಳನ್ನು ಮಾಡುತ್ತ ಬಂದವು.

ಕುರಿಕಿಹಳ್ಳಿ ಕೊಪ್ಪರದ ಆಸುಪಾಸಿನ ಒಂದು ಊರು. ಅಲ್ಲಿಗೆ ಬಂದಾಗ ನಾರಪ್ಪಯ್ಯನವರಿಗೆ ಗೆಜ್ಜೆಯ ಧ್ವನಿಯು ಕೇಳಿಸಲಿಲ್ಲ. ಉದ್ವಿಗ್ನರಾಗಿ ತಕ್ಷಣವೇ ತಿರುಗಿ ನೋಡಿದಾಗ ಆಕಳು ಒಂದು ಶಿಲೆಯ ಮೇಲೆ ಹಾಲನ್ನು ಕರೆಯುತ್ತಿತ್ತು. ಆ ಶಿಲೆಯು ಸಾಕ್ಷಾತ್ ವೆಂಕಟರಮಣನ ಮೂರ್ತಿಯಾಗಿತ್ತು. ದೇವರ ದರ್ಶನವಾದುದಕ್ಕೆ ನಾರಪ್ಪಯ್ಯನವರು ತುಂಬ ಸಂತಸಗೊಂಡು ಮುಂದೆ ಸಾಗಿದರು. ಕೊಪ್ಪರವನ್ನು ತಲುಪಿದೊಡನೆಯೇ ಗೋವು ಅಶ್ವತ್ಥ ವೃ ಕ್ಷದ ಮೂಲದಲ್ಲಿ ಕ್ಷೀರಾಭೀಷೇಕವನ್ನು ಮಾಡಿತು. ಸಾನ್ನಿಧ್ಯವು ಸ್ಥಾಪಿತವಾಯಿತು.


ಇನ್ನು ಈ ಅಶ್ವತ್ಥ ನಾರಸಿಂಹನ ಗರ್ಭಗುಡಿಯಲ್ಲಿ ಇರುವ ವೆಂಕಟರಮಣನ ಮೂರ್ತಿಯ ಬಗೆಗೆ ಅರ್ಚಕ ವಂಶದವರಲ್ಲಿ ಸಿಗುವ ವಿವರಣೆ ಹೀಗಿದೆ. ಈ ಮೇಲಿನ ಘಟನೆ ನಡೆದ ಕೆಲವು ದಿವಸಗಳ ನಂತರ ವೆಂಕಟರಮಣನು ಅರ್ಚಕರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ತಾನು ಕೃಷ್ಣಾ ನದಿಯಲ್ಲಿ ಇರುವೆನೆಂದೂ, ತನ್ನನ್ನು ಅಶ್ವತ್ಥ ನಾರಸಿಂಹನ ಪಕ್ಕದಲ್ಲಿ ಸ್ಥಾಪಿಸಬೇಕೆಂದೂ ಸೂಚನೆಯನ್ನಿತ್ತನು ಅದರಂತೆ ನದೀ ತೀರದಲ್ಲಿ ಹುಡುಕಿದಾಗ ಸುಂದರವಾದ ವೆಂಕಟರಮಣನ ಮೂರ್ತಿಯು ದೊರಕಿತು. ಅದನ್ನು ಗರ್ಭಗುಡಿಯಲ್ಲಿ ಅಶ್ವತ್ಥ ನಾರಸಿಂಹನ ಪಕ್ಕದಲ್ಲಿ ಸ್ಥಾಪಿಸಲಾಯಿತು/. (ಚಿತ್ರ 2)

ಚಿತ್ರ 1



ಅಶ್ವತ್ಥ ವೃಕ್ಷದಲ್ಲಿ ನೆಲೆಸಿರುವ
ಶ್ರೀ ನರಸಿಂಹ

ಚಿತ್ರ 2



ನಾರಪ್ಪಯ್ಯನಿಗೊಲಿದ
ವೆಂಕಟರಮಣ

ಇದಾದ ನಂತರ ನಾರಪ್ಪನವರು ನಿರುತವೂ ಅಶ್ವತ್ಥ ನಾರಸಿಂಹನ ಹಾಗೂ ವೆಂಕಟರಮಣನ ಪೂಜೆಯಲ್ಲಿ ನಿರತರಾದರು. ದೇವರ ಸೇವೆಗೆಂದು ಭಕ್ತ ಜನರು ಗೋವುಗಳನ್ನು ದಾನವಾಗಿ ಕೊಟ್ಟರು. ಈ ಗೋವುಗಳನ್ನು ಕಾಯುತ್ತಿದ್ದ ಬಾಲಕರು ಒಮ್ಮೆ ಭಯವನ್ನು ವ್ಯಕ್ತಪಡಿಸಿದಾಗ ನಾರಪ್ಪಯ್ಯನವರು ಶಿಲೆಯೊಂದರ ಮೇಲೆ ಅಂಗಾರದಿಂದ ಪ್ರಾಣೇಶನ ಮೂರ್ತಿಯನ್ನು ಬರೆದರು. ಈತನೇ ಭಯ-ಪರಿಹಾರಕನು ಎಂದು ಬಾಲಕರಿಗೆ ಅಭಯವನ್ನಿತ್ತರು. ಈ ಮುರ್ತಿಯೇ ಮುಂದೆ ಹಟ್ಟಿಯ ಹನುಮಪ್ಪನೆಂದು ಪ್ರಸಿದ್ಧನಾದನು.

ವಿಜಾಪುರದ ಸುಲ್ತಾನನಿಗೆ ಸ್ವಪ್ನದಲ್ಲಿ ದರ್ಶನ :

ಕೊಪ್ಪರ ಕ್ಷೇತ್ರವು ಹಿಂದೂ ಮುಸ್ಲಿಂ ಧಾರ್ಮಿಕ ಸಾಮರಸ್ಯದ ಒಂದು ಐತಿಹಾಸಿಕ ನಿದರ್ಶನವೂ ಆಗಿದೆ. ಅಶ್ವತ್ಥ ನಾರಸಿಂಹನ ಗುಡಿಯ ಈಗಿನ ಸ್ವರೂಪವನ್ನು ಗಮನಿಸಿದರೆ, ಮುಸ್ಲಿಂ ವಾಸ್ತು ಶಿಲ್ಪದ ಕುರುಹುಗಳು ಕಂಡು ಬರುತ್ತವೆ. ಅದರಲ್ಲೂ ವಿಶೇಷವಾಗಿ ಗುಡಿಯ ಗೋಪುರ ಗುಮ್ಮಟಾಕಾರವಾಗಿರುವುದು, ತುದಿಯಲ್ಲಿ ಕಮಲದ ಮೊಗ್ಗಿನ ವಿನ್ಯಾಸವಿರುವುದು, ಇವೆಲ್ಲ ಸ್ಪಷ್ಟವಾಗಿ ಇಸ್ಲಾಮೀ ಶಿಲ್ಪಕಲೆಯ ಲಕ್ಷಣಗಳು ಅಶ್ವತ್ಥ ನಾರಸಿಂಹನ ಮಂದಿರವು ಸಾಕಷ್ಟು ವಿಶಾಲವಾದ ಕಟ್ಟೆಯ ಮೇಲೆ ಮಧ್ಯದಲ್ಲಿ ನಿರ್ಮಾಣವಾಗಿದೆ. ಈ ವಿಸ್ತಾರವಾದ ಕಟ್ಟೆ ಮತ್ತು ಮಂದಿರ ಇವುಗಳನ್ನು ಕಟ್ಟಿಸಿದವನು ಒಬ್ಬ ಮುಸ್ಲಿಂ ದೊರೆ ಎಂಬ ಸಂಗತಿ ಅತ್ಯಂತ ಸ್ವಾರಸ್ಯಮಯವು ಆಶ್ಚರ್ಯಕರವು ಆಗಿದೆ, ಸುಮಾರು ಏಳುನೂರು ವರ್ಷಗಳ ಹಿಂದೆ ನಡೆದ ಈ ಘಟನೆಯ ವಿವರಗಳು ಹೀಗಿವೆ.

ಒಮ್ಮೆ ವಿಜಾಪುರದ ಆದಿಲ್‌ಶಾಹಿ ಮನೆತನದ ದೊರೆ ಅಲಿ ಆದಿಲ್‌ಶಾಹಿಯು ಸೈನ್ಯ ಸಮೇತ ಸಂಚಾರ ಮಾಡುತ್ತಾ ಕೊಪ್ಪರಕ್ಕೆ ಸಮೀಪದಲ್ಲಿರುವ ಚನ್ನೂರು ಗ್ರಾಮದಲ್ಲಿ ಬಿಡಾರ ಮಾಡಿದನು. ಆದಿನ ಇದ್ದಕಿದ್ದಂತೆಯೆ ಸೈನ್ಯವು ಅಸಾಮಾನ್ಯ ಘಟನೆಗಳಿಂದಾಗಿ ಭಯಭ್ರಾಂತ ಗೊಂಡಿತು ಅಲ್ಲಿನ ಜನರು ಇದಕ್ಕೆ ಕೊಪ್ಪರದ ನರಸಿಂಹ ದೇವರ ಮಹಿಮೆಯೇ ಕಾರಣ ಎಂದು ಉದ್ಗರಿಸಿದರು. ಎರಡನೆ ದಿನ ರಾತ್ರಿ ಸುಲ್ತಾನನು ಮಲಗಿದ್ದಾಗ ಅವನ ಕನಸಿನಲ್ಲಿ ಅಶ್ವತ್ಥನಾರಸಿಂಹನು ವಟು ರೂಪದಲ್ಲಿ ಕಾಣಿಸಿಕೊಂಡು ಕೊಪ್ಪರದ ಅಶ್ವತ್ಥ ವೃಕ್ಷವನ್ನು ತೋರಿಸಿ '' ಭೂಪನೇ, ಈ ವೃಕ್ಷದ ಸುತ್ತಲೂ ಭದ್ರವಾದ ಕಟ್ಟೆಯನ್ನು ಕಟ್ಟಿಸು, ನಿನಗೆ ಶ್ರೇಷ್ಠನಾದ ಮಗನು ಹುಟ್ಟುತ್ತಾನೆ '' ಎಂದು ತಿಳಿಸಿದನು. ಸುಲ್ತಾನನು ಬೆಳಿಗ್ಗೆ ಎದ್ದು ಸೈನ್ಯ ಸಮೇತನಾಗಿ ಭದ್ರವಾದ ಕಟ್ಟೆಯನ್ನು ಕಟ್ಟಿಸಿದನು. ಅಲ್ಲದೆ ಒಂದು ಮಂದಿರವನ್ನೂ ಕಟ್ಟಿಸಿದನು. ವೃಕ್ಷದ ಹಿಂಭಾಗದಲ್ಲಿ ಈಶ್ವರನ ಮಂದಿರವೂ ಅದರ ಪಕ್ಕದಲ್ಲಿ ನಂದಿ ಮಂಟಪವೂ ಇದೇ ಸಮಯದಲ್ಲಿಯೇ ನಿರ್ಮಾಣಗೊಂಡವು ಇಷ್ಟೆಲ್ಲ ಕಟ್ಟಡ ಕಾರ್ಯಗಳಲ್ಲದೆ ಸುಲ್ತಾನನು ದೇವರಿಗೆ ಅನೇಕ ಭೂಮಿಗಳನ್ನು ದಾನವಾಗಿ ಕೊಟ್ಟನು. ಈ ಸಂಗತಿ ನಡೆದುದಕ್ಕೆ ಸಾಕ್ಷಿ ಯಾಗಿ ಇಂದಿಗೂ ಜನರು ಗುಡಿಗೆ ಹೋಗುವ ದಾರಿಯಲ್ಲಿ ಆನೆಗಳನ್ನು ಕಟ್ಟುವ ಶಿಲೆಗಳನ್ನು ತೋರಿಸುತ್ತಾರೆ.

ಅಶ್ವತ್ಥ ವೃಕ್ಷದಿಂದ ಸಾಲಿಗ್ರಾಮ ವೃಷ್ಟಿ

ಕೊಪ್ಪರ ಕ್ಷೇತ್ರದ ಅಶ್ವತ್ಥ ವೃಕ್ಷವು ಎಲ್ಲಾ ವೃಕ್ಷಗಳಂತೆ ಸಾಮಾನ್ಯ ವೃಕ್ಷವಲ್ಲ. ಇದಕ್ಕೆ ಸಂಬಂಧಿಸಿದಂತೆ ಅಸದೃಶವಾದ ಅದ್ಭುತವಾದ ಮಹಿಮೆಯೊಂದಿದೆ. ಅದೇಂದರೆ ಈ ವೃಕ್ಷದ ಶಾಖೋಪಶಾಖೆಗಳಿಂದಲೂ, ಮೂಲವೃಕ್ಷದಿಂದಲೂ, ಅನೇಕ ಸಾಲಿಗ್ರಾಮಗಳು ಆಗಾಗ್ಗೆ ಉದುರಿ ಬೀಳುವುವು. ಗರ್ಭಗುಡಿಯಲ್ಲಿ ಈಗ ಸ್ಥಾಪಿತವಾಗಿರುವ ಷೋಡಶ ಬಾಹುಗಳ ಸ್ವಯಂವ್ಯಕ್ತ ನಾರಸಿಂಹನ ಸಾಲಿಗ್ರಾಮವು ಸುಮಾರು ಎರಡು ನೂರಾ ಐವತ್ತು ವರ್ಷಗಳ ಹಿಂದೆ ವೈಶಾಖ ಶುದ್ಧ ದ್ವಾದಶಿಯ ದಿನದಂದು, ಇದ್ದಕ್ಕಿದ್ದಂತೆ ಛಟ್ ಛಳಿಲ್ ಎಂದು ಸಿಡಿಲಿನಂತೆ ಶಬ್ದ ಮಾಡುತ್ತಾ ಸೀಳಿದ ಅಶ್ವತ್ಥ ವೃಕ್ಷದ ಬುಡದಿಂದ ತಾನಗಿಯೇ ಹೊರಗೆ ಬಂದಿತು. ತೊಡೆಗಳ ಮೇಲೆ ಹಿರಣ್ಯಕಶಿಪುವನ್ನು ಹಾಕಿಕೊಂಡು ಕರುಳನ್ನು ಬಗೆಯುತ್ತಿರುವ ಉಗ್ರ ನರಸಿಂಹನ ಮೂರ್ತಿಯು ಈ ಸಾಲಿಗ್ರಾಮದಲ್ಲಿದೆ. ಜೊತೆಗೆ ಉದುರಿಂದ ಇನ್ನಿತರೆ ನೂರಾರು ಸಾಲಿಗ್ರಾಮದಲ್ಲಿದೆ. ಜೊತೆಗೆ ಉದುರಿದ ಇನ್ನಿತರೆ ನೂರಾರು ಸಾಲಿಗ್ರಾಮಗಳಿಲ್ಲಿ ಏಳು-ಎಂಟು ಸಾಲಿಗ್ರಾಮಗಳನ್ನು ಮಾತ್ರ ತೆಗೆದಿಟ್ಟು ಉಳಿದವುಗಳನ್ನು ಷೋಡಶ ಬಾಹು ಸಾಲಿಗ್ರಾಮವನ್ನು ಸ್ಥಾಪಿಸುವಾಗ, ತಳಕ್ಕೆ ಹಾಕಿ ಕಟ್ಟೆ ಕಟ್ಟಲಾಗಿದೆ. (ಚಿತ್ರ 3)

ಚಿತ್ರ 3



ಸ್ವಯಂವ್ಯಕ್ತ ಷೋಡಶಬಾಹು ನರಸಿಂಹನ ಸಾಲಿಗ್ರಾಮ

ಶ್ರೀ ಪಾದರು " ಶ್ರೀ ಪಾದರಾಜರಾದದ್ದು "

ಕೊಪ್ಪರ ಕ್ಷೇತ್ರವು ಕರ್ನಾಟಕದ ಭಕ್ತಿಪಂಥದ ಹಾಗೂ ದಾಸ ಸಾಹಿತ್ಯದ ಚರಿತ್ರೆಯಲ್ಲಿಯೂ ಕೂಡ ಮಹತ್ವವನ್ನು ಪಡೆದ ಸ್ಥಲವಾಗಿದೆ. ದೇವರ ಪೂಜೆಯ ಸಮಯದಲ್ಲಿ ಕೇವಲ ಸಂಸ್ಕೃತ ಮಾತ್ರವೇ ಬಳಕೆಯಾಗುತ್ತಿದ್ದು, ಕನ್ನಡ ಪದವೆಂದರೆ ಮೈಲಿಗೆ ಎಂದು ಭಾವಿಸುತ್ತಿದ್ದ ಕಾಲದಲ್ಲಿ ಸ್ವಯಂ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ದೇವಪೂಜಾ ಸಮಯದಲ್ಲಿ ಹಾಡಿ ಅವುಗಳಿಗೆ " ಮಂತ್ರ ಸಾಹಿತ್ಯ " ದ ಸ್ಥಾನ ಒದಗಿಸಿದ ಮಹಾತ್ಮರು " ಶ್ರೀ ಪಾದರಾಜರು, ಇವರು ದಾಸ ಸಾಹಿತ್ಯದ ಮೊದಲನೆ ಘಟ್ಟದ ಮಹತ್ವದ ಕವಿಗಳೆನಿಸಿದ್ದಾರೆ. ಇವರ ಹೆಸರು ' ಶ್ರೀ ಪಾದರಾಜ' ಎಂದಿದ್ದು, ಇದು ಇಟ್ಟ ಹೆಸರಲ್ಲ, ಕೊಟ್ಟ ಹೆಸರು ಅಥವಾ ಪಡೆದ ಹೆಸರು ಎನ್ನುವುದು ಚರಿತ್ರೆಯ ಸಂಗತಿ. ಈ ಚರಿತ್ರೆಗೆ ನಾಟ್ಯರಂಗವಾದದ್ದು ಕೊಪ್ಪರದ ಅಶ್ವತ್ಥ ನಾರಸಿಂಹನ ಕಟ್ಟೆ

ಪೂರ್ವದಲ್ಲಿ ಶ್ರೀ ಶ್ರೀ ಶ್ರೀ ವಿಬುಧೇಂದ್ರ ತೀರ್ಥ ಶ್ರೀ ಪಾದಂಗಳವರು (1435-1490) ಶ್ರೀ ಲಕ್ಷ್ಮೀ ನಾರಾಯಣ ತೀರ್ಥ (0) ರೇ ಮೊದಲಾದ ಅನೇಕ ಶಿಷ್ಯರೊಡನೆ ಕೊಪ್ಪರಕ್ಕೆ ಆಗಮಿಸಿ ನಿರಂತರ ಶ್ರೀ ಮನ್ನ್ಯಾಯಸುಧಾ ಪಾಠ ಪ್ರವಚನವನ್ನು ನಡೆಸಿದ್ದರು. ಇದನ್ನು ಕೇಳಿ ತಿಳಿದು ಉತ್ತರಾದಿ ಮಠಾಧೀಶರಾಗಿದ್ದ ಶ್ರೀ 1008 ಶ್ರೀ ರಘುನಾಥ ತೀರ್ಥ ಶ್ರೀ ಪಾದಂಗಳವರು ಕೊಪ್ಪರಕ್ಕೆ ಬಂದರು. ಅವರನ್ನು ಸಂತೋಷದಿಂದ ಸ್ವಾಗತಿಸಿ ಶ್ರೀ ವಿಭುದೇಂದ್ರ ತೀರ್ಥರು ವೃಕ್ಷದಲ್ಲಿ ಸನ್ನಿಹಿತನಾಗಿರುವ ನರಸಹರಿಯ ಎದುರು ತಮ್ಮ ಶಿಷ್ಯರು ಮಾಡುವ ವ್ಯಾಖ್ಯಾನದ ಪರೀಕ್ಷೆಯನ್ನು ಮಾಡುವಂತೆ ಹೇಳಿದರು. ಶ್ರೀ ವಿಬುಧೇಂದ್ರ ತೀರ್ಥರ ಆಜ್ಞೆಯ ಮೇರೆಗೆ ಶ್ರೀ ಲಕ್ಷ್ಮೀನಾರಾಯಣ ತೀರ್ಥರು ಶ್ರೀ ಮನ್ನ್ಯಾಯ ಸುಧಾ ಜಿಜ್ಞಾಸಾಧಿಕರಣವನ್ನು ಉಪನ್ಯಾಸ ರೂಪದಲ್ಲಿ ಅನುವಾದ ಮಾಡಿದರು. ಅನಂತರ ನ್ಯಾಯ ಸುಧಾಭಾಗವನ್ನು ಸಂಕ್ಷೇಪವಾಗಿ ಅನುವಾದ ಮಾಡಿ ಒಂದು ಪೂರ್ವ ಪಕ್ಷವನ್ನು ತೆಗೆದರು. ಅದಕ್ಕೆ ತಾವೇ ಸಮಾಧಾನವನ್ನು ಹೇಳಿದರು. ಶ್ರೀ ಲಕ್ಷ್ಮೀನಾರಾಯಣ ತೀರ್ಥರ ಈ ವಿದ್ವತ್ಪೂರ್ಣ ಅನುವಾದವನ್ನು ಕೇಳಿ ಶ್ರೀ ರಘುನಾಥ ತೀರ್ಥರು ಪರಮಾನಂದ ಭರಿತರಾದರು ಮತ್ತು ಅವರನ್ನು ಮನಸಾರೆ ಶ್ಲಾಘಿಸಿದರು. ಇದರಿಂದ ಸಂತಸಗೊಂಡ ಶ್ರೀ ಲಕ್ಷ್ಮೀನಾರಾಯಣ ತೀರ್ಥರು ವಿನಯದಿಂದ " ತಾವು ಶ್ರೀ ಪಾದಂಗಳವರು, ತಮಗೆ ಯಾರು ಸರಿದೂಗುವರು " ಎಂದು ನುಡಿದರು. ಆಗ ಶ್ರೀ ಪಾದಂಗಳವರು " ನಾವು ಶ್ರೀಪಾದರು ನಿಜ. ಆದರೆ ನೀವು " ಶ್ರೀ ಪಾದರಾಜರು " ನಾವೇ ಈ ದಿನ ಪ್ರೀತರಾಗಿ ನಿಮಗೆ ಈ ಬಿರುದನ್ನು ಕೊಟ್ಟು ಗೌರವಿಸುತ್ತೇನೆ" ಎಂದು ಹೇಳಿದರು. ಈ ಸಂಗತಿ ನಡೆದ ಮೇಲೆ ಲಕ್ಷ್ಮೀನಾರಾಯಣ ತೀರ್ಥರು ಶ್ರೀ ಪಾದ ರಾಜ ರೆಂದೇ ಪ್ರಖ್ಯಾತರಾದರು.

ಕೊಪ್ಪರ ಕ್ಷೇತ್ರಕ್ಕೆ ಸದ್ಬ್ರಾಹ್ಮಣನೊಬ್ಬನು ಸಕುಟುಂಬನಾಗಿ ಬಂದು ಶ್ರೀ ನರಸಿಂಹ ಸ್ವಾಮಿಗೆ ಸೇವೆಯನ್ನು ಸಲ್ಲಿಸಿದನು. ಇದರ ಫಲವಾಗಿ ಆತನಿಗೆ

---

(0). ಇದು ಶ್ರೀ ಪಾದರಾಜರ ಪೂರ್ವಾಶ್ರಮದ ಹೆಸರು.

ಪುತ್ರ ಸಂತತಿಯು ಲಭಿಸಿತು. ಆ ಬಾಲಕನೇ ಮುಂದೆ ಕ್ರಿ.ಶ. 1660 ರಲ್ಲಿ ಶ್ರೀ ಸತ್ಯನಿಧಿಗಳಿಂದ ಆಶ್ರಮ ಪಡೆದು ಶ್ರೀ ಸತ್ಯಾನಂದ ತೀರ್ಥರೆಂಬಯತಿಯಾದನು.

ಉತ್ತರಾದಿ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀ ಸತ್ಯಧರ್ಮತೀರ್ಥ ಶ್ರೀ ಪಾದಂಗಳವರು ಈ ಕ್ಷೇತ್ರಕ್ಕೆ ಯಾತ್ರಾರ್ಥಿಗಳಾಗಿ ಬಂದು ನರಸಿಂಹ ದೇವರಿಗೆ ವಜ್ರಪದಕ ಸಹಿತವಾದ ಮುತ್ತಿನ ಹಾರವನ್ನು ಸಮರ್ಪಿಸಿದ್ದಾರೆ.

ಜನಾರ್ದನರು ಜನರ ಬಾಯಲ್ಲಿ ತಂಗಳೊಡೆಯರಾದದ್ದು

ಕೊಪ್ಪರ ಕ್ಷೇತ್ರವು ಅಲೌಕಿಕಮಯವಾದ ವಾತಾವರಣದಿಂದ ಕೂಡಿದೆ. ಅಲ್ಲಿನ ಒಂದೊಂದು ಕಲ್ಲು ಕೂಡ ಯಾವುದೋ ಅಲೌಕಿಕ ಕಥೆಯನ್ನು ಹೇಳುವಂತೆ ತೋರುತ್ತದೆ. ಕೊಪ್ಪರಕ್ಕೆ ಆಗಮಿಸಿದವರಿಗೆ ನರಸಿಂಹನ ಗುಡಿಗಿಂತ ಮೊದಲು ಎದುರಾಗುವುದು ಶ್ರೀ ಜನಾರ್ದನ ಒಡೆಯರ ಬೃಂದಾವನ, ಇವರನ್ನು '' ತಂಗಳು ಒಡೆಯರು '' ಎಂದೇ ಕರೆಯುವುದು ಪ್ರತೀತಿ.

ಈ ಜನಾರ್ದನ ಒಡೆಯರು ತಂಗಳು ಒಡೆಯರಾದದ್ದು ಒಂದು ಸ್ವಾರಸ್ಯಕರವಾದ ಸಂಗತಿ. ಇವರು ಒಬ್ಬ ವಿರಕ್ತ ಸನ್ಯಾಸಿಯಾಗಿದ್ದರು. ನಿತ್ಯವೂ ಶ್ರೀ ನರಸಿಂಹನ ಸೇವೆಯನ್ನು ಮಾಡುತ್ತಾ ಜಪ ತಪಾದಿಗಳಲ್ಲಿ ನಿರತರಾಗಿದ್ದರು. ಇವರ ದೈನಂದಿನ ಕರ್ಮದಲ್ಲಿ ಸಾಮಾನ್ಯರಿಗೆ ಆಶ್ಚರ್ಯವೆನಿಸಬಹುದಾದ ಒಂದು ವರ್ತನೆ ಇತ್ತು. ಇವರು ಪ್ರತಿನಿತ್ಯವೂ ಮಧುಕರ ವೃತ್ತಿಯಿಂದ ಅನ್ನವನ್ನು ತಂದು ಇಂದಿನ ಅನ್ನವನ್ನು ಜೋಳಿಗೆಯಲ್ಲಿಟ್ಟು ತೂಗುಹಾಕುತ್ತಿದ್ದರು. ಅದನ್ನೇ ಮರು ದಿನ ನದಿಯಲ್ಲಿ ಅದ್ದಿ ದೇವರಿಗೆ ನೈವೇದ್ಯ ಮಾಡಿ, ನಂತರ ಸೇವಿಸುತ್ತಿದ್ದರು. ಇದನ್ನು ಗಮನಿಸಿದ ವಿಪ್ರನೊಬ್ಬನು ''ಅಯ್ಯೋ ! ಇದೇನು ಅನ್ಯಾಯ ! ಸ್ವಾಮಿಗಳಾಗಿಯೂ ದಿನಾ '' ತಂಗಳು'' ಅನ್ನವನ್ನು ತಿನ್ನುವರಲ್ಲ ! ಎಂದು ನಿಂದಿಸಿದ. ಇದೇ ಪ್ರಚಾರವಾಗಿ ಜನರು ಅವರನ್ನು ''ತಂಗಳೊಡೆಯರು '' ಎಂದೇ ಕರೆಯಲಾರಂಭಿಸಿದರು. ಸ್ವಾಮಿಗಳಿಗೂ ಇದು ತಿಳಿಯಿತು. ಒಂದು ದಿನ ಪೂಜೆಯ ಸಮಯದಲ್ಲಿ ತಮ್ಮನ್ನು ನಿಂದಿಸಿದ ವಿಪ್ರನನ್ನೆ ಕರೆದು, '' ಅಪ್ಪಾ, ಇವತ್ತು ತಂದಬಿಸಿ ಬಿಸಿ ಅನ್ನವನ್ನು ಗಿಡಕ್ಕೆ ತೂಗುಹಾಕಿ ನಿನ್ನಿನ ತಂಗಳ ಅನ್ನದ ಜೋಳಿಗೆಯನ್ನು ತೆಗೆದುಕೊಂಡು ಬಾ'' ಎಂದು ಹೇಳಿದರು. ಅದರಂತೆ ಆತನು ವೃಕ್ಷದ ಸಮೀಪಕ್ಕೆ ಹೋಗಿ ನಿನ್ನಿನ ಆಹಾರವಿದ್ದ ಜೋಳಿಗೆಯನ್ನು ಮುಟ್ಟಲು ಅದು ಬಿಸಿಬಿಸಿಯಾಗಿ ಸುಡುತ್ತಿತ್ತು ಅದನ್ನು ಬಿಚ್ಚಿ ಸ್ವಾಮಿಗಳ ಮುಂದೆ ತಂದಿರಿಸುತ್ತಾ '' ಸ್ವಾಮಿ ! ಅನ್ನವು ಬಹಳ ಸುಡುತ್ತಿದೆ '' ಎಂದು ನುಡಿದನು. ಅದಕ್ಕೆ ಸ್ವಾಮಿಗಳು '' ಅಪ್ಪಾ! ನಾವು ತಂಗಳ ಅನ್ನ ತಿನ್ನುವವರು. ಅದು ಏಕೆ ಸುಡುತ್ತಿದೆ ? ಎಂದು ನುಡಿದರು. ವಿಪ್ರನು ಭಯಚಕಿತನಾಗಿ ಸಾಷ್ಟಾಂಗ ನಮಸ್ಕರಿಸಿ ಕ್ಷಮೆಯಾಚಿಸಿದನು. ಸ್ವಾಮಿಗಳು ಆತನನ್ನು ಕ್ಷಮಿಸಿ ಅನುಗ್ರಹಿಸಿದರು. ಕಾಲಾಂತರದಲ್ಲಿ ಸ್ವಾಮಿಗಳು ವೃಂದಾವನಸ್ಥರಾದರು. ಒಂದು ದಿನ ವೃಂದಾವನವಿದ್ದ ಜಾಗದಲ್ಲಿ ನವಿಲೊಂದು ಆಡುತ್ತಿತ್ತು. ಇದನ್ನು ಕಂಡು ಜನರು ಇವರನ್ನು ಷಣ್ಮುಖಾಂಶ ಸಂಭೂತರೆಂದು ತಿಳಿದು ಗೌರವಿಸಿದರು.

ವಿಕೃತಿ ಸಂವತ್ಸರ ಪುಷ್ಯ ದ್ವಾದಶಿ ದಿನದಂದು ಇವರಿಗೆ ಮಂದಿರವನ್ನು ಕಟ್ಟಿಸಬೇಕೆಂದು ಪ್ರಯತ್ನಿಸಿದಾಗ ನೆಲವನ್ನು ಅಗೆದಾಗ ಸ್ವಾಮಿಗಳ ಶರೀರವು ಕಾಣಿಸಿತು. ಶರೀರವು ಯಾವ ರೀತಿಯಲ್ಲಿಯೂ ಹಾಳಾಗಿರಲಿಲ್ಲ, ಗೋಪಿಚಂದನದ ಮುದ್ರೆಗಳೂ ಸ್ವಲ್ಪವೂ ಕೆಡದಂತೆ ಇದ್ದವು ಎಂದು ಜನರು ಹೇಳುತ್ತಾರೆ.

ಕೊಪ್ಪರದಲ್ಲಿ ಪ್ರತಿದಿನವೂ ನರಸಿಂಹನ ಪೂಜೆಯ ಜೊತೆಗೆ ಹಟ್ಟಿ ಹನುಮಪ್ಪನಿಗೂ ಜನಾರ್ದನ ಒಡೆಯರಿಗೂ ಪೂಜೆ ನೈವೇದ್ಯಗಳು ಸಲ್ಲುತ್ತವೆ.

ಸಂತಾನವನ್ನು ಅನುಗ್ರಹಿಸಿದ ಅಪ್ಪಾವರು

ಕೊಪ್ಪರ ಕ್ಷೇತ್ರಕ್ಕೆ ಯಾತ್ರೆಗೆ ಬಂದ ಅನೇಕಾನೇಕ ಮಹನೀಯರಲ್ಲಿ ಶ್ರೀ ವಿಭರಾಂಪುರದ '' ಕೃಷ್ಣಾಚಾರ್ಯರು '' ಪ್ರಸಿದ್ಧರು. ತಮ್ಮ ದಯೆ ಕರುಣೆ ವಾತ್ಸಲ್ಯಗಳಿಂದ ಇವರು ಜನರ ಬಾಯಲ್ಲಿ ಅಪ್ಪಾ ಅವರು ಎಂದೇ ಕರೆಸಿಕೊಂಡರು ಅಪ್ಪಾ ಅವರ ಕೊಪ್ಪರಕ್ಕೆ ಬಂದು ಶ್ರೀ ನರಸಿಂಹನ ಕಟ್ಟೆಯ

ಬಲಭಾಗದಲ್ಲಿರುವ ಒಂದಂಕಣದ ನಂದಿಗುಡಿಯಲ್ಲಿ ಕುಳಿತು ಅನುಷ್ಠಾನ ಮಾಡಿಕೊಳ್ಳುತ್ತಿದ್ದರು. ಈ ಗುಡಿಯಲ್ಲಿ ಬಾಗಿಲು ಕಡೆ ಬೆನ್ನು ಮಾಡಿ ಕುಳಿತಿರುವ ಒಂದು ಎತ್ತಿನ ವಿಗ್ರಹವಲ್ಲದೇ ಮತ್ತೇನೂ ಇಲ್ಲ. ಅದರ ಸಮ್ಮುಖದಲ್ಲಿ ಈಶ್ವರ ಲಿಂಗವಾಗಲೀ ಅಥವಾ ಅದರ ಪೃಷ್ಠವಾಗಲೀ ಏನೂ ಇಲ್ಲ. ಆದ್ದರಿಂದ ಇದು ನಮ್ಮ ಶ್ರೀ ಜಯ ತೀರ್ಥ (ಟೀಕಾಚಾರ್ಯ)ರ ಪೂರ್ವಾವತಾರ (ಎತ್ತು)ವೆಂದೇ ಭಾವಿಸಿ ಆಸ್ಥಳದಲ್ಲಿ ಅಪ್ಪಾ ಅವರು ಕುಳಿತುಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಒಂದು ಘಟನೆ ನಡೆಯಿತು.

ಶ್ರೀ ನರಸಿಂಹ ದೇವರ ಅರ್ಚಕರಿಗೆ ಪುತ್ರಸಂತಾನವಿರಲ್ಲಿ, ಕುಂ.ಸೌ. ನರಸಮ್ಮನೆಂಬ ಒಬ್ಬಳೇ ಮಗಳು ಇದ್ದಳು. ಅವಳನ್ನು ಗಿರಿಯಛಾರ್ಯರಿಗೆ ಕೊಟ್ಟು ಮದುವೆ ಮಾಡಿದ್ದರು. ಅರ್ಚಕ ಶ್ರೀ ಭೀಮಶೇನಾಚಾರ್ಯರು ಮಗಳನ್ನೂ ಅಳಿಯನನ್ನೂ ತಮ್ಮಲ್ಲಿಯೇ ಇಟ್ಟು ಕೊಂಡು ರಕ್ಷಣೆ ಮಾಡುತ್ತಿದ್ದರು. ನರಸಮ್ಮನಿಗೂ ವಿವಾಹವಾಗಿ ಬಹುಕಾಲದವರೆಗೆ ಮಕ್ಕಳಾಗಲಿಲ್ಲ. ಆದ್ದರಿಂದ ಆಕೆ ಸಂತಾನವನ್ನು ಬಯಸಿ ಶ್ರೀ ಅಶ್ವತ್ಥ ನರಸಿಂಹನಿಗೆ ಪ್ರತಿನಿತ್ಯವೂ ಪ್ರದಕ್ಷಿಣೆ, ನಮಸ್ಕಾರಾದಿಗಳ ಸೇವೆಯನ್ನು ಸಲ್ಲಿಸತೊಡಗಿದಳು. ಶ್ರೀ ನರಸಿಂಹನ ಸೇವೆಯನ್ನು ಮುಗಿಸಿಕೊಂಡು ಬರುವಾಗ ನಂದಿ ಮಂಡಪದಲ್ಲಿ ಕುಳಿತಿರುತ್ತಿದ್ದ ಅಪ್ಪಾವರಿಗೆ ನಮಸ್ಕರಿಸಿ ಬರುತ್ತಿದ್ದಳು. ಅಪ್ಪಾವರು ಭಕ್ತರಿಗೆ ಅವರವರ ಇಷ್ಟಾರ್ಥಗಳು ಸಲ್ಲುವಂತೆ ಅನುಗ್ರಹಿಸುತ್ತಿದ್ದುದನ್ನು, ಜನರು ಅವರ ಮಹಾಮಹಿಮೆಯ ಬಗ್ಗೆ ಚರ್ಚಿಸುತ್ತಿದ್ದುದನ್ನು ಕೇಳಿ ತಿಳಿದ ನರಸಮ್ಮನಿಗೆ ತಾನೂ ಅವರ ಬಳಿ ಸಂತಾನಕ್ಕಾಗಿ ಕೇಳಿಕೊಳ್ಳಬೇಕೆಂಬ ಇಚ್ಛೆಯಾಯಿತು. ತನ್ನ ಈ ಇಚ್ಛೆಯನ್ನು ತಂದೆಯ ಎದುರು ವ್ಯಕ್ತಪಡಿಸಿಳು. ಅದಕ್ಕೆ ಅವರು '' ಸಕಲ ಇಷ್ಟಾರ್ಥಗಳನ್ನು ನೆರವೇರಿಸುವ ನಮ್ಮ ನರಸಿಂಹ ದೇವರಿರುವಾಗ ಅವರಿವರ ಬಳಿ ಯಾಕೆ ದೈನ್ಯಬಡಬೇಕು '' ಎಂದು ನುಡಿದರು. ಈ ಸಂವಾದ ನಡೆದ ಮರುದಿನ ಶ್ರೀ ಭೀಮಸೇನಾಚಾರ್ಯರು ಗುಡಿಯ ಬಳಿ ಬಂದಾಗ ಅವರಿಗೆ ನಂದಿಮಂಟಪದಲ್ಲಿ ಅನುಷ್ಠಾನ ಮಾಡುತ್ತಿದ್ದ ಅಪ್ಪಾ ಅವರ ಬದಲಾಗಿ ಭೀಕರ ಘಟಸರ್ಪ ಕಾಣಿಸಿತು. (0) ಈ ನೋಟದಿಂದ ಭಯಕಂಪಿತರಾದ ಶ್ರೀ ಭೀಮಸೇನಾಚಾರ್ಯರು ತಾವು ಹಿಂದಿನ ದಿನ ಆಡಿದ ಮಾತುಗಳನ್ನು ನೆನಸಿಕೊಂಡು , ಪಾಶ್ಚಾತ್ತಾಪದಿಂದ ಬಂದು ಅಪ್ಪಾ ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದರು. ತಮ್ಮ ತಪ್ಪನ್ನು ಕ್ಷಮಿಸಿ ಪ್ರಸನ್ನರಾಗುವಂತೆ ಮತ್ತೆ ಮತ್ತೆ ಬೇಡಿಕೊಂಡರು. ಮತ್ತೆ ಮೊದಲಿನ ಮಾನವ ರೂಪವನ್ನು ಧರಿಸಿದ ಅಪ್ಪಾವರಲ್ಲಿ, ತಮ್ಮ ಮಗಳಿಗೆ ಸಂತಾನವನ್ನು ಕರುಣಿಸುವಂತೆ ವಿನಮ್ರರಾಗಿ ಬೇಡಿಕೊಂಡರು. ಆಗ ಅಪ್ಪಾ ಅವರು ನಕ್ಕು '' ನಾವು ಸಮಾನ್ಯರು, ನಮ್ಮ ಕೈಯಲ್ಲೇನಿದೆ'' ಎಂದು ಅರ್ಚಕರ ಮಾತುಗಳನ್ನೇ ಅವರಿಗೆ ತಿರುಗಿ ನುಡಿದರು. ಅರ್ಚಕರು ತಮ್ಮ ಅಪರಾಧವನ್ನು ಕ್ಷಮಿಸಿ ಅನುಗ್ರಹಿಸಿಸಬೇಕೆಂದು ಬೇಡಿಕೊಂಡರು. ಆಗ ಅಪ್ಪಾ ಅವರು ಸಮೀಪದಲ್ಲಿ ನಿಂತಿದ್ದ ನರಸಮ್ಮನನ್ನು ಕರೆದು ಆಕೆಯ ಉಡಿಯಲ್ಲಿ ಎರಡು ತೆಂಗಿನ ಫಲಗಳನ್ನು ಹಾಕಿದರು. ಅವುಗಳಲ್ಲಿ ಮೊದಲನೆಯ ಫಲವು ಉಡಿಯಿಂದ ಜಾರಿ ಕೆಳಕ್ಕೆ ಬಿದ್ದಿತು. ಎರಡನೆಯದು ಸ್ಥಿರವಾಗಿ ಉಳಿಯಿತು. ಇದಕ್ಕೆ ಅಪ್ಪಾವರು '' ನೋಡಮ್ಮ ನಿನಗೆ ಮೊದಲನೆಯ ಸಂತತಿಯು ಉಪಯೋಗ ಬೀಳುವುದಿಲ್ಲ. ಎರಡನೆಯ ಪುತ್ರ ಸಂತತಿಯೇ ಸ್ಥಿರವಾಗಿ ಉಳಿಯುವುದು. ಅದರ ಸಂತತಿಯ ಶಾಖೋಪ ಶಾಖೆಗಳೇ ಮುಂದೆ ಪರಂಪರೆಯಲ್ಲಿ ಈ ಸ್ವಾಮಿಯ ಅರ್ಚಕರಾಗಿರುತ್ತಾರೆ '' ಎಂದು ಹೇಳಿದರು . ಅದರಂತೆ ಮೊದಲನೇಯ ಮಗು ಜನಿಸಿದ ಕೆಲ ಕಾಲಾ ನಂತರ ತೀರಿಹೋಯಿತು. ಎರಡನೇಯವರಾಗಿ ಜನಿಸಿದ ಶ್ರೀ ಭೀಮಸೇನಾಚಾರ್ಯರ ಸಂತತಿಯವರೇ ಪ್ರಸ್ತುತದಲ್ಲಿ ಶ್ರೀ ನಾರಸಿಂಹನ ಸೇವೆಯನ್ನು ಅವ್ಯಾಹತವಾಗಿ

---

(0) ಅಪ್ಪಾ ಅವರ ಜೀವನ ಚರಿತ್ರೆಯಲ್ಲಿ ಅವರು ಆಗಾಗ ಸರ್ಪದ ರೂಪವನ್ನು ಧರಿಸುತ್ತಿದ್ದ ಸಂಗತಿ ಬರುತ್ತದೆ.

ನಡೆಸಿಕೊಂಡು ಬಂದಿರುತ್ತಾರೆ. ಅದೇ ಮನೆತನದವರಿಂದಲೇ ಇಂದಿಗೂ ಸುವ್ಯವಸ್ಥಿತವಾಗಿ ಶ್ರೀ ಅಶ್ವತ್ಥ ನರಸಿಂಹ, ಸ್ವಯಂವ್ಯಕ್ತ ಷೋಡಶಬಾಹು ನರಸಿಂಹ, ಮತ್ತು ಶ್ರೀ ವೆಂಕಟರಮಣ ಮೂರ್ತಿಗಳಿಗೆ ಹಾಗೂ ಇತರ ಕೆಲವು ಸಾಲಿಗ್ರಾಮಗಳಿಗೆ ನಿತ್ಯವೂ ಪೂಜೆ ನಡೆಯುತ್ತದೆ. ಬಂದ ಭಕ್ತರಿಗೆಲ್ಲ ತಪ್ಪದೆ ಪ್ರಸಾದವು ದೊರೆಯುತ್ತದೆ.

ಕ್ಷೇತ್ರದಲ್ಲಿ ಅರ್ಚಕರ ಮನೆತನಗಳ ನಡುವೆ ಪೂಜೆಯು ಪ್ರತಿವರ್ಷ ಪರಸ್ಪರ ಹಸ್ತಾಂತರಗೊಳ್ಳುತ್ತದೆ. ಟೀಕಾರಾಯರ ಪಂಚಮಿಯಂದು ಈ ಕಾರ್ಯ ನಡೆಯುತ್ತದೆ. ಒಂದು ವರ್ಷ ಪೂಜಾಕಾರ್ಯವಾದರೆ, ಅದರ ಮರುವರ್ಷ ಆಯಾ ಅರ್ಚಕರು ಮೂರು ಪ್ರಸ್ತಗಳನ್ನು ನೆರವೇರಿಸಬೇಕಾಗುತ್ತದೆ. ನವರಾತ್ರಿ, ಮಕರ ಸಂಕ್ರಾಂತಿ ಹಾಗೂ ನರಸಿಂಹ ಜಯಂತಿಗಳಂದು ಪಲ್ಲಕ್ಕಿ ಸೇವೆ, ಓಲಗ ಬಾಜಾ ಬಜಂತ್ರಿಗಳೊಡನೆ ಅತ್ಯಂತ ಸಂಭ್ರಮದಿಂದ, ವಿಜೃಂಭಣೆಯಿಂದ ಉತ್ಸವವು ಜರುಗತ್ತದೆ. ಸಾವಿರಾರು ಜನರು ನೆರೆದು ಸ್ವಾಮಿಗೆ ತಮ್ಮ ಸೇವೆಯನ್ನು ಸಲ್ಲಿಸಿ ಪ್ರಸಾದ ಸ್ವೀಕರಿಸುತ್ತಾರೆ.

ಇತ್ತೀಚಿನ ಅಭಿವೃದ್ಧಿ ಕಾರ್ಯಗಳು :

ಭಕ್ತರಿಗೆ ಯಾವ ತೊಂದರೆಗಳೂ ಆಗದಂತೆ ಕ್ಷೇತ್ರದಲ್ಲಿ ಪ್ರಸ್ತುತ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿವೆ. 1984 ರಲ್ಲಿ ಸುಮಾರು 500 ಜನರಿಗೆ ನೆರಳಾಗುವಂತೆ ಟಿನ್ ಶೆಡ್ ಅನ್ನು ಶಿಲಾಮಂಟಪದ ಮುಂದೆ ನಿರ್ಮಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿದ್ದು, ನಿವೃತ್ತರಾಗಿ ಸ್ವಾಮಿಯ ಸೇವೆಗೆಂದು ಕೊಪ್ಪರದಲ್ಲೆ ನೆಲೆಸಿರುವ ಅರ್ಚಕ ಮನೆತನದವರಾದ ಶ್ರೀ ಜಯಾಚಾರ್ಯ ಇವರ ಪರಿಶ್ರಮ ಹಾಗೂ ನೇತೃತ್ವದಲ್ಲಿ ಈ ಮಂಟಪವು ನಿರ್ಮಾಣಗೊಂಡಿತು.

ಶ್ರೀ ಜನಾರ್ದನರಾವ ದೇಸಾಯಿ ಇವರ ಪುತ್ರರಾದ ಶ್ರೀ ಆರ್. ಜೆ. ದೇಸಾಯಿಯವರು ತಮ್ಮ ತಂದೆ ತಾಯಿಗಳ ಸ್ಮರಣಾರ್ಥವಾಗಿ ಎರಡು ಕೋಣೆಗಳ ವಿಶ್ರಾಂತಿ ಗೃಹವನ್ನು ಗುಡಿಗೆ ಹೋಗುವ ದಾರಿಯಲ್ಲಿ ಕಟ್ಟಿಸಿದ್ದಾರೆ.

1995ರಲ್ಲಿ ಶ್ರೀ ನರಸಿಂಹಾಚಾರ್ಯ ದಿದ್ದಿಗಿ ಇವರು ಒಂದು ಕೋಣೆಯ ವಿಶ್ರಾಂತಿ ಗೃಹವನ್ನು ಕಟ್ಟಿಸಿದ್ದಾರೆ. ಲೋಕಸಭಾ ಸದಸ್ಯರಾದ ಶ್ರೀ ವೆಂಕಟೇಶನಾಯಕರವರು ಎರಡು ಕೋಣೆಗಳ ವಿಶ್ರಾಂತಿ ಗೃಹ ಕಟ್ಟಿಸಲು ಧನಸಹಾಯ ನೀಡಿದ್ದಾರೆ.

ಕಾಡಾ (ಕೃಷ್ಣಾ) ಯೋಜನೆ, ಭೀಮರಾಯನಗುಡಿ ಇವರ ಸಹಕಾರದಿಂದ ಗುಡಿಯ ಎದುರು ಕಲ್ಯಾಣಮಂಟಪವು ನಿರ್ಮಾಣಗೊಳ್ಳುತ್ತಿದೆ.

ಭಕ್ತರೊಬ್ಬರ ಧನಸಹಾಯದಿಂದಾಗಿ ನಿತ್ಯವೂ ನಾರಸಿಂಹನ ಪೂಜೆಗೆ ವಿವಿಧ ಬಗೆಯ ಹೂವುಗಳು ದೊರೆಯುವಂತೆ ಚಿಕ್ಕ ಹೂದೋಟವೊಂದು ನಾಲ್ಕು ವರ್ಷಗಳ ಹಿಂದೆ ನಿರ್ಮಾಣವಾಗಿದೆ.

ಹೀಗೆ ಅತ್ಯಂತ ಪುಣ್ಯಕ್ಷೇತ್ರ ಕೊಪ್ಪರವು ನಾರಸಿಂಹನ ಜಾಗೃತ ಸನ್ನಿಧಾನವುಳ್ಳ ಸ್ಥಳವಾಗಿದ್ದು, ಅಸಂಖ್ಯ ಭಕ್ತರನ್ನು ಆಕರ್ಷಿಸುತ್ತದೆ. ಕೃಷ್ಣಾ ನದೀ ತೀರದಲ್ಲಿ ಎತ್ತರವಾದ ಕಟ್ಟೆಯ ಮೇಲಿನ ನಾರಸಿಂಹನ

ಮಂದಿರ ಸುತ್ತಮುತ್ತಲಿನ ಪ್ರಾಕೃತಿಕ ಸೌಂದರ್ಯ, ಸದಾ ಮಂತ್ರ ಘೋಷದಂತೆ ಜುಳಜುಳನೇ ಹರಿಯುವ ಕೃಷ್ಣಾನದಿ, ಇವುಗಳಿಂದಾಗಿ ಈ ಕ್ಷೇತ್ರವು ತಪಸ್ಸಿಗೆ ಅತ್ಯಂತ ಯೋಗ್ಯ ಸ್ಥಳವಾಗಿದೆ. ಭಕ್ತರಲ್ಲಿ ಆಧ್ಯಾತ್ಮ ಜಾಗೃತಿಯನ್ನುಂಟು ಮಾಡುವ ಮಹಿಮೆಯುಳ್ಳದ್ದಾಗಿದೆ. ಇಂತಹ ಕೊಪ್ಪರ ಕ್ಷೇತ್ರಕ್ಕೆ ಯಾತ್ರೆಗೆ ಬರಲು ಎಷ್ಟೋ ಜನ್ಮದ ಪುಣ್ಯವಿರಬೇಕು. ಈ ಪುಣ್ಯಕ್ಷೇತ್ರದಲ್ಲಿ ಮತ್ತು ಕೃಷ್ಣಾತೀರದಲ್ಲಿ ಜನ್ಮವೆತ್ತಿದವರು ಅಥವಾ ವಾಸಿಸುವರೇ ಧನ್ಯರು.

ಬಂದ ಭಕ್ತರಿಗೆ ತಾವು ಪ್ರಾಚೀನ ಕಾಲದ ಯಾವುದೋ ತಪೋಭೂಮಿಯಲ್ಲಿ ಸಂಚರಿಸಿದ ಅನುಭವವಾಗುತ್ತದೆ.

ಪರಿಶಿಷ್ಟ 1

ಮಹಾತ್ಮೆಗಳು

ಶ್ರೀ ನಾರಸಿಂಹನ ಜಾಗೃತ ಸನ್ನಿಧಾನವುಳ್ಳ ಕೊಪ್ಪರ ಕ್ಷೇತ್ರದಲ್ಲಿ ಆಗಾಗ್ಗೆ ಕೆಲವು ಅಲೌಕಿಕ ಘಟನೆಗಳು ನಡೆದಿವೆ. ಈ ಘಟನೆಗಳ ಅರಿವಿನೊಡನೆ ಕೊಪ್ಪರ ಕ್ಷೇತ್ರದ ಮಹಾತ್ಮೆ ಜ್ಞಾನವು ಸಂಪೂರ್ಣವೆನಿಸುತ್ತದೆ. ಇವು ಅರ್ಚಕರಿಗೆ ಸ್ವಂತ ಅನುಭವಕ್ಕೆ ಬಂದವೇ ಆಗಿವೆ.

1) ಅಶ್ವತ್ಥ ನರಸಿಂಹನಿಗೆ ದೇವತೆಗಳಿಂದ ಪೂಜೆ
2) ಧನುರ್ಮಾಸದಲ್ಲಿ ದೇವರ ಪೂಜೆ
3) ಕೊಪ್ಪರದಲ್ಲಿಯೇ ಸಕಲ ಕ್ಷೇತ್ರ ಸನ್ನಿಧಾನ
4) ಬ್ರಹ್ಮರಾಕ್ಷಸ ಜನ್ಮ ಮೋಚನೆ
5) ದೇವತೆಗಳಿಂದಲೇ ಅಡಿಗೆಯ ಸಾಮಾಗ್ರಿ ಒದಗಿದ್ದು
6) ಶಿಲಾಮಂಟಪದ ರಚನೆಗೆ ದೇವರ ಸಹಾಯ.
7) ಅಶ್ವತ್ಥನೇ ಪ್ರತ್ಯಕ್ಷ ಬೆಂಗಾವಲಿದ್ದುದು.
8) ಅಪಮೃತ್ಯು ಪರಿಹಾರ.

ಈ ಘಟನೆಗಳ ವಿವರಗಳನ್ನು ಒಂದೊಂದಾಗಿ ನೋಡಬಹದು.

1) ಅಶ್ವತ್ಥ ನರಸಿಂಹನಿಗೆ ದೇವತೆಗಳಿಂದ ಪೂಜೆ

ಸುಮಾರು 300 ವರ್ಷಗಳ ಹಿಂದೆ ದಕ್ಷಿಣಾಯನ ಪರ್ವಕಾಲದಲ್ಲಿ ಕೃಷ್ಣಾನದಿಗೆ ಪೂರ್ಣ ಪ್ರವಾಹವು ಬಂದಿತು. ನದಿಯು ನರಸಿಂಹ ದೇವರ ಕಟ್ಟೆಯನ್ನು ಸುತ್ತು ಹಾಕಿ ರಭಸದಿಂದ ಹರಿಯುತ್ತಿತ್ತು. ಹೀಗಾಗಿ ದೇವರ ಪೂಜೆಗೆ ಗುಡಿಗೆ ಹೋಗಲು ಸಾಧ್ಯವಿರಲಿಲ್ಲ. ಆಗ ಸ್ವಾಮಿಯು ಅರ್ಚಕರಾಗಿದ್ದ ಹರಿಯಾಚಾರ್ಯರ ಸ್ವಪ್ನದಲ್ಲಿ ದರ್ಶನವಿತ್ತು ಆಚಾರ್ಯರೇ ! ಪೂಜಾಕ್ಕೆ ನೀವೇನು ಬರುವ ಅಗತ್ಯವಿಲ್ಲ. ದೇವತೆಗಳೇ ನಮ್ಮ ಪೂಜೆ ಮಾಡುತ್ತಾರೇ '' ಎಂದು ತಿಳಿಸಿದ . ಆದರೆ

ಗೋಪಾಲಕೃಷ್ಣಾಚಾರ್ಯ ಮತ್ತು ಕಟ್ಟಾಚಾರ್ಯ ಎಂಬ ಬಲಿಷ್ಠ ಶಿಷ್ಯರು ಆಚಾರ್ಯರಿಗೆ ಶಕ್ತಿ ಇಲ್ಲವಾದ್ದರಿಂದ ಹೀಗೆ ಹೇಳುತ್ತಾರೆ. ನಾವೇ ಹೋಗಿ ಬರೋಣವೆಂದು ಇಬ್ಬರೂ ಮಾತಾಡಿಕೊಂಡು ಪೂರ್ಣ ಪ್ರವಾಹದಲ್ಲಿ ಈಸುಬಿದ್ದು ಹೊರಟರು. ಅಲ್ಲಿ ಗುಡಿಯೊಳಗೆ ನೋಡಲಾಗಿ ಗುಡಿಯ ತುಂಬ ಋಷಿಗಳು ನಿಂತಿದ್ದಾರೆ. ಅವರೆಲ್ಲ ದೇವಪೂಜಾದಲ್ಲಿ ನಿರತರಾಗಿದ್ದುದು ಕಾಣಿಸಿತು. ಅವರ ಭವ್ಯರೂಪ ನೋಡಿ ಭಯಭ್ರಾಂತರಾಗಿ ಹಿಂತಿರುಗಿದರು. ಹೇಗೊ ತಿರುಗಿ ಬಂದವರನ್ನು ಉಷ್ಣೋಪಚಾರದಿಂದ ಸಂತೈಸಿದ ಮೇಲೆ ಕಂಡುದನ್ನೆಲ್ಲಾ ಹೇಳಿದರು. ಆಗ ಹರಿಯಾಚಾರ್ಯರು ಕರುಣೆಯಿಂದ '' ದೇವತೆಗಳನ್ನು ಪರೀಕ್ಷೆ ಮಾಡುವುದು ಸರಿಯಲ್ಲ. ಇನ್ನು ಮೇಲೆ ಹೀಗೆ ಮಾಡಬೇಡಿ'' ಎಂದು ಅಪ್ಪಣೆ ಇತ್ತರು.

2) ಧನುರ್ಮಾಸಲ್ಲಿ ದೇವರ ಪೂಜೆ

ಅರ್ಚಕ ಭೀಮಸೇನಾಚಾರ್ಯರು ಧನುರ್ಮಾಸದಲ್ಲಿ ದೇವರ ಪೂಜೆಯು ಕಷ್ಟಕರವಾಗಿದ್ದರೂ '' ಧನುರ್ಮಾಸ ಪೂಜಾ ಮಾಡಲು ನಾವು ಸಮರ್ಥರಿದ್ದೀವಿ. ಏಕೆ ಹೋಗಬಾರದೆಂದು ಬೆಳಿಗ್ಗೆ ಮೂರು ಘಂಟೆ ವೇಳೆಗೆ ನದಿಗೆ ತೆರಳಿದರು. ಅಲ್ಲಿ ಅಖಂಡ ವೇದ ಘೋಷ. ಮಂತ್ರ ಪಠನಾದಿ ಮಹಾಮಹೋತ್ಸವವೇ ನಡೆದಿತ್ತು. ತೆತ್ತೀಸಿ ಕೋಟಿ ದೇವತೆಗಳ ಬ್ರಹ್ಮದೇವರಿಂದೊಡಗೂಡಿ ಬಂದದ್ದು ಕಾಣಿಸಿತು. ಮುಕ್ಕೋಟಿ ದ್ವಾದಶಿಯಂದು ಶ್ರೀ ಅಶ್ವತ್ಥ ನರಸಿಂಹನ ಪೂಜೆಗೆ ನಾವೆಲ್ಲರೂ ತಪ್ಪದೇ ಬರುವವರು'' ಎಂದು ಅಲ್ಲಿ ಯಾರೋ ಒಬ್ಬರು ತಿಳಿಸಿದರು. ಭೀಮಸೇನಾಚಾರ್ಯರು ಆನಂದ ತುಂದಿಲರಾಗಿ ಮಹಿಮೆಯನ್ನು ಆಪ್ತರಿಗೆಲ್ಲ ತಿಳಿಸಿದರು.

3) ಕೊಪ್ಪರದಲ್ಲಿಯೇ ಸಕಲ ಕ್ಷೇತ್ರ ಸನ್ನಿಧಾನ

ಅರ್ಚಕ ಭೀಮಸೇನಾಚಾರ್ಯರು ಅತ್ಯಂತ ಸಂಪ್ರದಾಯನಿಷ್ಠರಾಗಿದ್ದರು. ಅವರು ರೈಲು, ಬಸ್ಸು, ಬಂಡಿ ಮೊದಲಾದ ವಾಹನಗಳನ್ನು ಹತ್ತುತ್ತಿರಲಿಲ್ಲ. ಎಲ್ಲಿಗೆ ಪ್ರಯಾಣ ಮಾಡಿದರೂ ಕುದುರೆಯ ಮೇಲೆಯೇ. ಒಂದು ಸಲ ಉಡುಪಿಗೆ ಯಾತ್ರೆ ಹೊರಡುವ ಇಚ್ಛೆಯಾಗಿ ಕುದುರೆಯನ್ನು ಹತ್ತಿ ಹೊರಟರು. ರಾಣಿ ಬೆನ್ನೂರಿನವರೆಗೆ ಬಂದು ಅಲ್ಲಿಂದ ಒಂದು ಕಾಡಹಳ್ಳಿಗೆ ಬಂದು ಮಲಗಿದಾಗ ಸ್ವಪ್ನವಾಯಿತು. '' ಕೊಪ್ಪರದಲ್ಲಿ ಇಲ್ಲದ ಕ್ಷೇತ್ರವು ಎಲ್ಲಿಯೂ ಇಲ್ಲ. ಉಡುಪಿಯೇ ಮೊದಲಾದ ಸಕಲ ಕ್ಷೇತ್ರಗಳ ಸನ್ನಿಧಾನವೂ, ಆಯಾ ಕ್ಷೇತ್ರ ಮೂರ್ತಿಗಳ ಸನ್ನಿಧಾನವೂ ಕೊಪ್ಪರದ ಅಶ್ವತ್ಥ ನರಸಿಂಹನಲ್ಲಿಯೇ ಇದೆ. ತಿರುಗಿ ಹೋಗು '' ಎಂದು ಅಪ್ಪಣೆಯಾಯಿತು. ಸಂತೋಷದಿಂದ ಅರ್ಚಕರು ಕೊಪ್ಪರಕ್ಕೆ ಹಿಂದಿರುಗಿದರು. ಈ ವಾರ್ತೆಯು ಲೋಕಪ್ರಖ್ಯಾತವಾಯಿತು.

4) ಬ್ರಹ್ಮರಾಕ್ಷಸ ಜನ್ಮ ವಿಮೋಚನ

ಸುಮಾರು ನೂರು ವರುಷಗಳ ಹಿಂದಿನ ಮಾತು ಆಗಿನ ಅರ್ಚಕರಾದ ಶ್ರೀ ವೆಂಕಟನರಸಿಂಹಚಾರ್ಯರು ಗುಡಿಯಲ್ಲಿ ಕುಳಿತಿದ್ದರು. ಆಗ ನೂರಾರು ಭಕ್ತರು ಗೋವಿಂದ ! ಗೋವಿಂದ!! ಗೋವಿಂದ !!! ಎಂದು ನಾಮ ಕೀರ್ತನೆ ಮಾಡುತ್ತ ಬರುತ್ತಿದ್ದಂತೆ ಕೇಳಿಸಿತು. ಸ್ವಲ್ಪ ಸಮಯದ ನಂತರ ಧ್ವನಿಯು ಕಡಿಮೆಯಾಗಿ ಹತ್ತು ಹನ್ನೆರಡು ಜನರು ಮಾತ್ರ ಇದ್ದಂತೆ ತೋರಿತು. ಇನ್ನೂ ಸ್ವಲ್ಪ ಹೊತ್ತಿನ ನಂತರ ನೋಡುವುದರಲ್ಲಿ ಗುಡಿಯ ಮುಂದೆ ಒಬ್ಬನೆ ಮನುಷ್ಯ ಕಾಣಿಸಿದ, ಅರ್ಚಕರು ಆತನನ್ನು ನೋಡಿ '' ಏನಪ್ಪ ! ನೀನು ಯಾರು ? ಮಿಕ್ಕವರೆಲ್ಲಾ ಎಲ್ಲಿಗೆ ಹೋದರು ? ''

ಎಂದು ಕೇಳಲು ಆತನು ''ಸ್ವಾಮಿ ! ಇರುವುದು ನಾನೊಬ್ಬನೇ, ಮತ್ತ್ಯಾರೂ ಇಲ್ಲ ನಾನು ಬ್ರಹ್ಮರಾಕ್ಷಸ ಜನ್ಮವನ್ನು ತಾಳಿದ ಒಬ್ಬಾನೊಬ್ಬ ಬ್ರಾಹ್ಮಣನು. ಈ ಗುಡಿಯ ಮುಂದಿರುವ ಸಿರಸದ ಗಿಡದಲ್ಲಿಯೇ ಇದ್ದು ಹನ್ನೆರಡು ವರುಷವಾಯಿತು. ನೀವು ನರಸಿಂಹ ಮಂತ್ರಸಿದ್ಧಿ ಉಳ್ಳವರು. ಏನೂ ಭೀತರಾಗಬೇಡಿ. ದಯವಿಟ್ಟು ನನಗೆ ತೀರ್ಥ ಕೊಟ್ಟರೆ ಈ ದುರ್ಯೋನಿಯಿಂದ ಮುಕ್ತನಾಗುತ್ತೇನೆ'' ಎಂದು ಬೇಡಿಕೊಳ್ಳಲು ಅರ್ಚಕರು ಅನುಗ್ರಹಿಸಿದರು. ತೀರ್ಥವನ್ನು ಸ್ವೀಕರಿಸಿದ್ದರಿಂದ ಬ್ರಹ್ಮರಾಕ್ಷಸ ಜನ್ಮವು ವಿಮೋಚನೆಯಾಯಿತು.

5) ದೇವತೆಗಳಿಂದ ಅಡಿಗೆ ಸಾಮಗ್ರಿ ಒದಗಿದುದು

ಪ್ರಕೃತ ಗುಡಿಯಲ್ಲಿ ಜರುಗುವ ಅನೇಕ ಉತ್ಸವ ಬ್ರಾಹ್ಮಣ ಸುವಾಸಿನಿಯರ ಭೋಜನಾದಿಗಳು ಆಸ್ತಿಪಾಸ್ತಿಯಿಂದ ಲಭಿಸಿದ ಸಾಮಗ್ರಿ ಮತ್ತು ಸಂಚಾರದಲ್ಲಿ ಲಭಿಸಿದ ದ್ರವ್ಯದಿಂದಲೂ ನಡೆಯುತ್ತಿವೆ. ಅರ್ಚಕ ಹರಿಯಾಚಾರ್ಯರ ಕಾಲದಲ್ಲಿ ಇದಕ್ಕೆ ಅವಕಾಶವಿರಲಿಲ್ಲ. ಅವರು ದೇವಾಲಯ ಬಿಟ್ಟು ಹೊರಗೆ ಹೆಜ್ಜೆ ಇಡುತ್ತಿರಲಿಲ್ಲ. ಆದರೂ ನವರಾತ್ರಿ ಉತ್ಸವ ಅಂದರೆ ದಿನಂಪ್ರತಿ ನೂರಾರು ಜನ ಭೋಜನ, ದಿನವೂ ಒಂದು ವಾಹನ ಉತ್ಸವ, ಪಲ್ಲಕ್ಕಿ ಉತ್ಸವ, ಐದು ಜನ ಕಂಕಣಬದ್ಧರಾಗಿ ಜಪ ಪಾರಾಯಣ ನಿರತರಾಗಿ ಏಕಭುಕ್ತಿಯಿಂದ ಮೈಲಿಗೆಯಾಗದಂತೆ ಮಡಿಯಿಂದಲೇ ಶಯನ, ಶ್ರೀ ವೆಂಕಟೇಶ ಮಾಹಾತ್ಮೆ ಪುರಾಣ, ಸಂಕ್ರಮಣ ಉತ್ಸವದಲಿ ನೂರಾರು ಜನ ವಿಪ್ರಸಂತರ್ಪಣೆ ತಿಲದಾನ ಶ್ರೀ ನರಸಿಂಹ ಜಯಂತಿ ಉತ್ಸವ ವೈಶಾಖ ಪೌರ್ಣಿಮಾ ದಿನ ಸಹಸ್ರಾರು ಜನ ಭೋಜನ ಇತ್ಯಾದಿ ಅನೇಕ ಉತ್ಸವಗಳನ್ನೂ ಮತ್ತೊಬ್ಬರನ್ನು ಯಾಚನೆ ಮಾಡದೇ ಆರ್ಚಕರು ನಿರ್ವಹಿಸುತ್ತಿದ್ದರು. ಒಂದು ಸಲ ನವರಾತ್ರಿ ಪಾಡ್ಯ ಬೆಳಿಗ್ಗೆ ಎದ್ದವರೇ ಆರ್ಚಕರು ಊರಿನ ಎಲ್ಲಾ ಜನಕ್ಕೂ ಕ್ರಮ ಪ್ರಕಾರ ಆಮಂತ್ರಣ ಕೊಟ್ಟು ಹೇಳಿ ಬಂದರು ಬೆಳಗಿನ ಹತ್ತು ಘಂಟೆಯಾಯಿತು. ಅಡಿಗೆಗೆ ಬೇಕಾದ ಸಾಮಗ್ರಿಗಳು ಇಲ್ಲ ಅರ್ಚಕರು ಪೂಜೆಗೆಂದು ಗುಡಿಗೆ ಹೊರಟು ಹೋಗಿದ್ದಾರೆ. ಅವರ ಧರ್ಮಪತ್ನಿಯು ಚಿಂತೆಯಿಂದ ಗುಡಿಗೆ ಬಂದು ಆರ್ಚಕರನ್ನು ಕಂಡು '' ಊರಜನಕ್ಕೆಲ್ಲಾ ನೀವು ಔತಣ ಹೇಳಿ ಬಂದಿರಿ. ಅಡಿಗೆ ಗತಿ ಏನು ? ಸಾಹಿತ್ಯ ಎಲ್ಲಿದೆ ? ಏನುಗತಿ'' ಎಂದು ಪೇಚಾಡಿದರು. '' ಅಷ್ಟೇಕೆ ಚಿಂತಿಸುತ್ತಿ ? ನಮ್ಮ ವೆಂಕಟೇಶ ಸಾಹಿತ್ಯ ತರಲು ಹೋಗಿದ್ದಾನೆ. ಈಗ ಬರುತ್ತಾನೆ. ಸ್ವಲ್ಪ ಸಹಿಸು '' ಎಂದು ಆರ್ಚಕರು ಸಮಾಧಾನ ಹೇಳಿದರು.

ಅಷ್ಟರಲ್ಲಿ ಆರ್ಚಕರ ಮನೆಯ ಮುಂದೆ ಹತ್ತು - ಹನ್ನೆರಡು ಕೋಣಗಳ ಮೇಲೆ ಸಕಲ ಸಂಭಾರ, ಸಾಹಿತ್ಯ ಸಾಮಗ್ರಿ ಮೂಟೆಗಳನ್ನು ಹೇರಿಕೊಂಡು ಒಬ್ಬ ಅಡಿಗೆಯ ಮಾಣಿ ಪ್ರತ್ಯಕ್ಷನಾದ, ಎಲ್ಲ ಮೂಟೆಗಳನ್ನು ಇಳಿಸಿದ ಮೇಲೆ ಕೋಣಗಳು ಹೊರಟುಹೋದವು ಮಾಣಿಯು ಅಲ್ಲೇ ನಿಂತು '' ಅಮ್ಮಾವರೇ ! ಇದೆಲ್ಲವನ್ನು ದೇಸಾಯಿಯವರು ನವರಾತ್ರಿ, ಉತ್ಸವಕ್ಕೆಂದು ಕಳಿಸಿದ್ದಾರೆ'' ಎಂದು ತಿಳಿಸಿದ. ಆ ಸಾಮಗ್ರಿಗಳ ಸಹಾಯದಿಂದ ಪಾಡ್ಯದಿಂದ ದಶಮಿಯವರೆಗೂ ನವರಾತ್ರಿ ಉತ್ಸವವು ಅತ್ಯಂತ ವಿಜೃಂಭಣೆಯಿಂದ ಜರುಗಿತು. ದ್ವಾದಶಿಯ ದಿನದ ಪಾರಣೆಯೂ ಮುಗಿಯಿತು. ಅಲ್ಲಿಗೆ ಸರಿಯಾಗಿ ಕೋಣಗಳ ಮೇಲೆ ಬಂದಿದ್ದ ಅಡಿಗೆಯ ಮಾಣಿಯು ಇದ್ದಕ್ಕಿದಂತೆ ಕಾಣೆಸದಾದ. ಇದೆಲ್ಲವೂ ದೇವರ ಲೀಲೆಯೆಂದು ಜನರು ಅಚ್ಚರಿಪಟ್ಟುಕೊಂಡರು.

6) ಶಿಲಾಮಂಟಪದ ರಚನೆಗೆ ದೇವರ ಸಹಾಯ

ಕೊಪ್ಪರದಲ್ಲಿರುವ ಪುರಾತನ ಶಿಲಾಮಂಟಪ ಶ್ರೀ ಇಭರಾಂಪುರ ಅಪ್ಪಾಅವರ ಅನುಗ್ರಹದಿಂದ ಜನಿಸಿದ ಭೀಮಸೇನಾಚಾರ್ಯರ ಕಾಲಕ್ಕೆ ನಿರ್ಮಾಣಗೊಂಡಿತು. ಈ ಶಿಲಾಮಂಟಪದ ರಚನೆಯ ಕಾಲಕ್ಕೆ ದೇವರ ಮಹಿಮೆಯು ವ್ಯಕ್ತವಾಗುವಂತಹ ಘಟನೆಯು ನಡೆಯಿತು.

ಶಿಲಾಮಂಟಪದ ಛಾವಣಿಗೆ ದೊಡ್ಡದೊಡ್ಡಹಾಸುಗಲ್ಲುಗಳನ್ನು ಏರಿಸಬೇಕಾದ ಸಂದರ್ಭ, ಆಗೆಲ್ಲ ಎತ್ತರಕ್ಕೆ ಕಲ್ಲುಗಳನ್ನು ಏರಿಸಲು ಬರಿ ಎಂದು ಮಣ್ಣಿನ ಹಿಂಗೋಡೆಗಳನ್ನು ರಚಿಸುತ್ತಿದ್ದರು. ಏರಿಸಬೇಕಾದ ಹಾಸುಗಲ್ಲಿಗೆ ಹಗ್ಗವನ್ನು ಕಟ್ಟಿ ಈ '' ಬರಿ''ಯ ಮೇಲೆ ಎಳೆಯುತ್ತ ಮೇಲಕ್ಕೆ ಏರಿಸುತ್ತಿದ್ದರು ಈ ಕೆಲಸವು ಪ್ರಾರಂಭವಾದಾಗ ಹಾಸುಗಲ್ಲುಗಳು ಮೇಲೆ ಏರಿದರೂ ಮತ್ತೆ ಸರ್ರನೆ ಜಾರಿ ಕೆಳಕ್ಕೆ ಬಂದುಬಿಡುತ್ತಿದ್ದವು. ಎಷ್ಟು ಪ್ರಯತ್ನಿಸಿದರೂ ಕಾರ್ಯವು ಕೈಗೂಡಲಿಲ್ಲ. ಅರ್ಚಕರಿಗೆ ಏನು ಮಾಡಬೇಕೆಂಬುದೇ ತಿಳಿಯದಾಯಿತು. ರಾತ್ರಿ ಮಲಗುವಾಗ ದೇವರನ್ನು ನೆನೆದು '' ಸ್ವಾಮಿ ! ನಿನ್ನ ಕಾರ್ಯ, ನೀನೇ ನಿಂತು ನಡೆಸು '' ಎಂದು ಬೇಡಿಕೊಂಡರು. ಸ್ವಪ್ನದಲ್ಲಿ ಸ್ವಾಮಿಯು ಕಾಣಿಸಿಕೊಂಡು '' ಚಿಂತಿಸಬೇಡ, ನನ್ನ ಸೇವಕರು ಬರುತ್ತಾರೆ '' ಎಂದು ನುಡಿದನು. ಮರುದಿನ ಅರ್ಚಕರು ಗುಡಿಗೆ ನಡೆದರು. ನಿರ್ಮಾಣ ಕಾರ್ಯ ಪ್ರಾರಂಬವಾಯಿತು. ಅದೇ ಸಮಯಕ್ಕೆ ಗುಡಿಯ ಅಶ್ವತ್ಥ ವೃಕ್ಷದ ಮೇಲೆ ಎರಡು ದೊಡ್ಡದೊಡ್ಡ ಕೋತಿಗಳು ಬಂದು ಕೂತವು. ಆಶ್ಚರ್ಯವೆನ್ನುವಂತೆ ಬಂಡೆಗಳು ಸರಾಗವಾಗಿ ಮೇಲೇರ ತೊಡಗಿದವು, ಕೆಲಸವು ಭರದಿಂದ ಸಾಗಿತು. ಸುಮಾರು ಎಂಟು ಒಂಬತ್ತು ದಿನಗಳವರೆಗೂ ಈ ಕೆಲಸ ನಡೆಯಿತು. ಅಷ್ಟು ದಿನಗಳೂ, ಆ ಎರಡು ಮಹಾ ಕಪಿಗಳು ಬಂದು ಮರದ ಮೇಲೆ ಕೂಡುತ್ತಿದ್ದವು. ಶಿಲಾಮಂಟಪದ ರಚನೆ ಮುಗಿದ ಮರುದಿನದಿಂದಲೇ ಅವು ತಿರುಗಿ ಕಾಣಿಸಲಿಲ್ಲ.


7) ಅಶ್ವತ್ಥನೆ ಪ್ರತ್ಯಕ್ಷ ಬೆಂಗಾವಲು ಇದ್ದದ್ದು

ಅರ್ಚಕ ವೆಂಕಟನರಸಿಂಹಚಾರ್ಯರು ದಿನಂಪ್ರತಿ ರಾತ್ರಿ ಬಹಳ ಹೊತ್ತಿನವರೆಗೆ ಗುಡಿಯಲ್ಲೆ ಇದ್ದು ಕಗ್ಗತ್ತಲಲ್ಲಿ ಮನೆಗೆ ಹೋಗುತ್ತಿದ್ದರು. ಅವರಿಗೆ ಯಾವ ಆಪತ್ತೂ ಬಾರದಂತೆ ದೇವರೇ ಅವರನ್ನು ರಕ್ಷಿಸುತ್ತಿದ್ದನು. ಒಂದು ದಿನ ಆಚಾರ್ಯರು ಸಂಜೆಯ ಮಂಗಳಾರತಿ ಮಾಡಿಕೊಂಡು ಕತ್ತಲಲ್ಲಿ ಮಧ್ಯರಾತ್ರಿಯಲ್ಲಿ ಮನೆಗೆ ಹೋಗುತ್ತಿರಲು ಕಾಲಲ್ಲಿ ಗೆಜ್ಜೆಗಳನ್ನು ಕಟ್ಟಿಕೊಂಡು ಕುಣಿಯುತ್ತ ಒಬ್ಬ ಬಾಲಕ ಅಗಸಿ ಬಾಗಿಲಿನವರೆಗೂ ಇವರ ಹಿಂದೆ ಬಂದನು. ಅವನು ಯಾರೆಂಬುದನ್ನು ಅರಿತ ಅರ್ಚಕರು ಥಟ್ಟನೆ ತಿರುಗಿ ನೋಡಿ '' ಅಪ್ಪಾ ! ನೀನು ಇನ್ನು ತಿರುಗಿ ಹೋಗಿ ಬಿಡು. ರಾತ್ರಿ ಹೊತ್ತು ಹುಡುಗ ಒಬ್ಬನೇ ಆಗುತಿ '' ಎಂದು ಹೇಳಿದರು. ಸ್ವಾಮಿಯು ಆಚಾರ್ಯರ ಯಾವಜ್ಜೀವವೂ ಹೀಗೆಯೇ ಪ್ರತ್ಯಕ್ಷ ಅಂಗರಕ್ಷಕನಾಗಿದ್ದು ರಕ್ಷಿ ಸಿದನು.

8) ಅಪಮೃತ್ಯು ಪರಿಹಾರ

ಪೂಜ್ಯ ಶ್ರೀ ಸುರುಪುರದ ಆಚಾರ್ಯರು ತಮ್ಮ 12 ಜನ ಶಿಷ್ಯರೊಂದಿಗೆ ಶ್ವೇತಶೃಂಗದಲ್ಲಿ ತೀರ್ಥವಿದಿ ಮಾಡಲು ಹೊರಟರು. ಆಗ ಅಲ್ಲಿ ಒಂದು ಆಕಳು ಮೇಯುತ್ತಿತ್ತು ಅದನ್ನು ಸಂಹರಿಸಲು

ಚಿತ್ರ 5



ಮೇಲಿನ ಚಿತ್ರದಲ್ಲಿ ನರಸಿಂಹ ದೇವರ ಗುಡಿಯಲ್ಲಿ ಕಾಣಸುವ ಮಂತ್ರಾಲಯರಾಯರ ವೃಂದಾವನವನ್ನು ಅವರತ್ತೊಂಬತ್ತು ವರ್ಷಗಳ ಹಿಂದೆ ಭೀಮಸೇನಾಚಾರ್ಯರು ಪ್ರತಿಷ್ಠಾಪಿಸಿದರು. ಹಾಗೆಯೇ, ಅಲ್ಲಿ ಕಾಣಸುವ ಮತ್ತೊಂದು ವೃಂದಾನವು ಶ್ರೀ ಶ್ರೀ ಶ್ರೀ ಸತ್ಯನಿಧಿತೀರ್ಥರದಾಗಿದೆ. ಇದನ್ನು ಹದಿನಾಲ್ಕು ವರ್ಷಗಳ ಹಿಂದೆ ಶ್ರೀ ಶ್ರೀ ಶ್ರಿ ಸತ್ಯಪ್ರಮೋದ ತೀರ್ಥರು ಪ್ರತಿಷ್ಠಾಪಿಸಿದರು.

ಚಿತ್ರ 6



ಶ್ರೀ ಪುರಂದರದಾಸರ ವಿಗ್ರಹವನ್ನು ಅರವತ್ತೆರಡು ವರ್ಷಗಳ ಹಿಂದೆ ಶ್ರೀ ಭೀಮಸೇನಾಚಾರ್ಯರು ಪ್ರತಿಷ್ಠಾಪಿಸಿದರು. ಅಂದಿನಿಂದ ಸತತವೂ ಪುರಂದರದಾಸರ ಆರಾಧನೆಯನ್ನು ಆಚರಿಸಲಾಗುತ್ತಿದೆ.

ಒಂದು ಹುಲಿಯು ಧಾವಿಸಿ ಬರುತ್ತಿದ್ದುದನ್ನು ಕಂಡು ಭಯಭೀತರಾಗಿ ನಡಗುತ್ತ '' ಕೊಪ್ಪರ ನರಸಿಂಹಾ ! ಪಾಹಿ ! ಎಂದು ಕೂಗಿ ಕರೆದರು. ಸ್ವಲ್ಪವೇಳೆಯಲ್ಲಿ ಆ ಗೋವಿನ ಪಕ್ಕದಲ್ಲಿ ಒಂದು ದೊಡ್ಡ ಸಿಂಹವು ಕುಳಿತಿದ್ದುದು ಕಾಣಿಸಿತು.ಸರಿ ಹುಲಿಯಾದರೇನು, ಸಿಂಹವಾದರೇನು ಗೋವು ಉಳಿಯುವುದಿಲ್ಲವಲ್ಲ ಎಂದು ದುಃಖಿಸಿದರು, ಆರ್ಭಟಿಸಿ ಬರುತ್ತಿದ್ದ ಹುಲಿಯು ಸಿಂಹವನ್ನು ಕಂಡು ತಿರುಗಿ ಪಲಾಯನ ಮಾಡಿತು. ಸಿಂಹವಾದರೂ ಸ್ವಲ್ಪವಾದರೂ ಶಬ್ದವನ್ನೇ ಮಾಡದೆ ಕುಳಿತಿತ್ತು. ಬೆದರಿಪಲಾಯನ ಮಾಡುವ ಹುಲಿಯ ಗರ್ಜನೆಗೆ ಭೀತವಾದ ಆಕಳು ಸಮೀಪದಲ್ಲೇ ಇದ್ದ ಸಿಂಹ ದರ್ಶನದಿಂದ ಮತ್ತಷ್ಟು ಹೆದರಿ ಮನುಷ್ಯರಿದ್ದೆಡೆಗೆ ಓಡಿಬಂದಿತು. ಸಿಂಹವು ಕಣ್ಮರೆಯಾಯಿತು. ಅಶ್ವತ್ಥನರಸಿಂಹನೇ ಸಿಂಹದ ರೂಪದಲ್ಲಿ ಬಂದಿದ್ದನೆಂಬುದನ್ನರಿತ ಅರ್ಚಕರು ಆ ಗೋವಿನ ಕ್ಷೀರದಿಂದಲೇ ದೇವರಿಗೆ ಅಭಿಷೇಕ ಮಾಡಿ ಪರಮಾನಂದ ಭರಿತರಾದರು. ಇಂಥ ಮಹಿಮೆಗಳು ಕೊಪ್ಪರ ಕ್ಷೇತ್ರದಲ್ಲಿ ಇನ್ನೂ ಬೇಕಾದಷ್ಟಿವೆ. ಕೆಲವನ್ನು ಮಾತ್ರ ಇಲ್ಲಿ ನೋಡಲಾಗಿದೆ. ಒಟ್ಟಿನಲ್ಲಿ ಕೊಪ್ಪರ ಕ್ಷೇತ್ರವು ಅಲೌಕಿಕ ಮಹಿಮೆಯಿಂದ ಕೂಡಿದ ಸ್ಥಲವಾಗಿದೆ.

ಕೊಪ್ಪರ ಕ್ಷೇತ್ರ ನರಸಿಂಹ ದೇವರ ಅರ್ಚಕರ ವಂಶವೃಕ್ಷ

ಪರಿಶಿಷ್ಟ II

ಶ್ರೀ ನಾರಪ್ಪಯ್ಯನವರು

-0-

-0-

ನಾರಾಯಣಾಚಾರ್ಯರು

ನರಸಿಂಹಾಚಾರ್ಯರು	ಅಶ್ವತ್ಥಾಚಾರ್ಯರು	ಹರಿಯಾಚಾರ್ಯರು
ನರಹರಿಯಾಚಾರ್ಯರು	ನಾರಾಯಣಾಚಾರ್ಯ	ಅನಂತಾಚಾರ್ಯರು
ಗದಾಧರಾಚಾರ್ಯರು	ಭೀಮಸೇನಾಚಾರ್ಯರು	ಗುಂಡಾಚಾರ್ಯರು
	ನರಸಿಂಹಾಚಾರ್ಯ	ವೆಂಕಟನರಸಿಂಹಾಚಾರ್ಯ
		ಶ್ರೀನಿವಾಸಚಾರ್ಯ
		ಚೂಡಾಮಣಿ ಆಚಾರ್ಯ

- ಅನಂತಾಚಾರ್ಯರು
  - ಗಿರಿಯಾಚಾರ್ಯ
    - ಹರಿಯಾಚಾರ್ಯರು
      - ವೆಂಕಟನರಸಿಂಹಾಚಾರ್ಯ
        - ಹರಿಯಾಚಾರ್ಯ
      - ಗಿರಿಯಾಚಾರ್ಯ
        - ಭೀಮಾಚಾರ್ಯರು
          - ಗಿರಿಯಾಚಾರ್ಯರು
            - ಅನಂತಾಚಾರ್ಯ
            - ಜಯಾಚಾರ್ಯ
              - ಹರಿಯಾಚಾರ್ಯ
                - ಭೀಮಸೇನಾಚಾರ್ಯ
                - ಕಟ್ಟ್ಯಾಚಾರ್ಯ
                - ಗುರುರಾಜಾಚಾರ್ಯ
              - ಭೀಮಸೇನಾಚಾರ್ಯ
          - ನಾರಾಯಣಾಚಾರ್ಯರು
            - ವೆಂಕಟನರಸಿಂಹಾಚಾರ್ಯ
            - ತಿರುಮಲಾಚಾರ್ಯ
            - ಅಶ್ವತ್ಥಾಚಾರ್ಯ
            - ಕೃಷ್ಣಾಚಾರ್ಯ
            - ಭೀಮಾಚಾರ್ಯ
        - ಕಟ್ಟ್ಯಾಚಾರ್ಯರು
  - ನಾರಾಯಣಾಚಾರ್ಯ
  - ಶೇಷಾಚಾರ್ಯ
- ನಾರಾಯಣಚಾರ್ಯರು
- ಶೇಷಾಚಾರ್ಯರು
  - ಜಯಾಚಾರ್ಯರು
    - ಅಶ್ವತ್ಥಾಚಾರ್ಯರು

ಕಾರ್ಪರ ಕ್ಷೇತ್ರ ಮಹಿಮಾವರ್ಣನೆಯ ಪದ

-ರಚನೆ : ಶ್ರೀ ಗಿರಿಯಾಚಾರ್ಯ

ರಾಗ : ಆನಂದ ಭೈರವಿ ತ್ರಿಪುಟತಾಳ

(ನೋಡ ಬನ್ನಿರಿ ಕಾರ್ಪರೇಶನ.. ಭಕ್ತಜನಮಂದಾರ ಸಿರಿನರಸಿಂಹನ)

ನೋಡಬನ್ನಿರಿ ಕಾರ್ಪರೇಶನ ಪಾಡಿರೈ ಸರ್ವೇಶನಾ ।
ರೂಢಿಯೊಳು ಶೇಷಾದ್ರಿ ನಿಲಯನ ಕೂಡಿಕೊಂಡಿಲ್ಲಿರುವನ ॥ ಪಲ್ಲ॥

ಚಿಪ್ಪಗಿರಿ ದಾಸಾರ್ಯರೀತರು ಪಿಪ್ಪಲವ ಕಂಡಾಗಲೇ ।
ಕಾರ್ಪರಾರಣ್ಯೆಂಬ ಪದದಿ ಸಂಕ್ಷಿಪ್ತ ಮಹಿಮೆಯ ಪೇಳ್ದರು ॥1॥

ಅಪರ ದಿಗ್ಭಾಗದಲಿ ನೋಡಲು ಸಪತ ಋಷಿಗಳ ಸ್ಥಾನವು ।
ತ್ರಿಪಥ ಗಾಮಿನಿ ವ್ಯಕ್ತಳಾದಳು ತಪಕೆ ವಿಶ್ವಾಮಿತ್ರರ ॥2॥

ಯತ್ರ ಶ್ವೇತ ಶೃಂಗ ಕೃಷ್ಣಾ ಚೋತ್ತರ ವಾಹಿನಿಯೊಳು ॥
ತತ್ರ ದಾನ ಸ್ನಾನ ಕಾಸಿಗೆ ಉತ್ತಮವು ಫಲವೀಯಲು ॥3॥

ಚಾರುಕೃಷ್ಣಾ ತೀರವಿದರೊಳು ಕಾರ್ಪರಾಖ್ಯ ಮುನೀಂದ್ರನಾ ।
ಘೋರತಪ ಕೊಲಿದರಳೆಮರದಾಗಾರನೆನಿಸಿದ ಧೀರನ ॥4॥

ನೀರಜಾಸನ ಮುಖ್ಯ ಸುರ ಪರಿವಾರ ಸೇವಿತ ಚರಣನ ।
ಸೇರಿದವರಘ ದೂರಮಾಡುವ ಘೋರ ನರಹರಿ ರೂಪನ ॥5॥

ಇಂತು ಅಶ್ವತ್ಥಾಂತರದಿ ಸಿರಿಕಾಂತನರಿಯನೆ ವಿಪ್ರರೊಳ್ ।
ಶಾಂತನಾರಪ್ಪಯ್ಯರೆಂಬ ಮಹಾಂತರಿಲ್ಲಿರುತಿಪ್ಪರು ॥6॥

ದೊಡ್ಡವರ ಗುರುತರಿಯದಿವರನು ದಡ್ಡರೆನ್ನುತ ಭ್ರಾತ್ರರು ।
ದೊಡ್ಡ ಕೃಷ್ಣಾನದಿಯೊಳಿವರನು ಕಟ್ಟಿಹಾಕಲು ಕೋಪದಿ ॥7॥

ಕಡಲ ಶಯನನ ಕರುಣದಿಂದಲಿ ದಡಕ್ಕೆ ಸೇರಿದ ನಂತರ ।
ದೃಢ ವಿರಾಗದಿ ವೆಂಕಟಾದ್ರಿಗೆ ನಡೆದರಾಗಲೆ ಹರುಷದಿ ॥8॥

ವಿಠ್ಠಲನ ಶುಭ ಚರಣ ಪಂಕಜ ಷಟ್ಪದಾಯಿತ ಚಿತ್ತರು ।
ಕೃಷ್ಣನಿರುತಿಹ ಬೆಟ್ಟದಡಿಯನು ಮುಟ್ಟಿಮಲಗಲು ಸ್ವಪ್ನದಿ ॥9॥

ಇಲ್ಲಿ ದರ್ಶನವಿಲ್ಲ ನೀವಿರುವಲ್ಲಿ ಪುಣ್ಯ ಸ್ಥಾನವು ।
ದುರ್ಲಭವು ಪಾಪಾತ್ಮರಿಗೆ ನೀನಲ್ಲಿ ಪೋಗಿರೋ ಭೂಸುರ ॥10॥

ಧೇನು ರೂಪದಿ ಬರುವೆ ಕಾರ್ಪರ ಕಾನನದ ಅಶ್ವತ್ಥದಿ ।
ಕಾಣುವುದು ಕ್ಷೀರಾಭಿಷೇಚನ ಧ್ಯಾನಿಸೆನ್ನನು ದ್ವಿಜವರ ॥11॥

ಇಂತು ಸ್ವಪ್ನದಿ ಸೂಚಿಸಿದ ವೃತ್ತಾಂತವನು ಸಂಚಿಂತಿಸಿ ।
ಕಂತು ಜನಕನ ಇಚ್ಛೆಯಿಂದತಿ ಸಂತಸದಿ ಗಿರಿಗೊಂದಿಸಿ ॥12॥

ಮುಂದೆ ನಡೆದರು ಹಿಂದೆ ಗೆಜ್ಜೆಗಳಿಂದ ಬರುತಿಹ ಗೋಗಳ ।

ದ್ವಂದ್ವ ರೂಪವ ನೋಡದಲೆ ಗೋವಿಂದನಂಘ್ರಿಯ ಸ್ಮರಿಸುತ ||13||

ಬರುತ ಬರುತಲೆ ತಿರುಗಿ ನೋಡಲು ಕುರುಕಿ ಹಳ್ಳಿಯ ಗ್ರಾಮದಿ |
ವರಶಿಲೆಯ ಮೇಲ್ಗರಿಯೆ ಪಾಲನು ತಿರುಮಲೇಶನ ಕಂಟರು ||14||

ತರುವತಾಶ್ವತ್ಥದಲಿ ಸಲೆ ಪಾಲ್ಗರಿಯೆ ಗುರುತನು ಕಾಣುತ |
ಗಿರಿಯ ವೆಂಕಟರಮಣ ತಾನಿಲ್ಲಿರಲು ಬಂದನು ಎನ್ನುತ ||15||

ನಿರುತ ಪೂಜೆಯ ಮಾಡುತಲೆ ಮುನಿವರನು ಸುಖದಿಂದಿರುತಿರೆ |
ತುರುಗಳನ್ನು ಶ್ರೀ ಹರಿಯು ಸೇವೆಗೆ ಶರಣು ಜನರೊಪ್ಪಿಸುತಿರೆ ||16||

ಬಂದರಲ್ಲಿಗೆ ತಮ್ಮ ಗ್ರಾಮದ ಬಂಧು ಬಾಲಕರೆಲ್ಲರು |
ಕಂದರಿಗೆ ಪೇಳಿದರು ಗೋಗಳ ವೃಂದ ಕಾಯುವದೆನುತಲಿ ||17||

ಚಾರು ಶಿಲೆಯೊಳಗೊಂದುದಿನ ಅಂಗಾರದಲಿ ಪ್ರಾಣೇಶನ |
ಮೂರತಿಯ ಬರೆದೀತ ಭಯ ಪರಿಹಾರಕನು ನಿಮಗೆಂದರು ||18||

ಹಟ್ಟಿಹನುಮನ್ ಪಾದ ಪದುಮವ ನಿಷ್ಠೆಯಿಂದಲಿ ಸೇವಿಸೆ |
ಇಷ್ಟಗಳು ದೊರೆಯುವವು ಬುಧ್ಯಾದ್ಯಷ್ಟಸಿದ್ಧಿಗಳಾಗ್ವವು ||19||

ಮೂಲ ಪುರುಷರು ಆವರೆ ನಾರಪ್ಪಯ್ಯರೆಂಬ ಮಹಾತ್ಮರು |
ಕಾಲ ಕಾಲಗಳಲ್ಲಿ ಸ್ಮರಿಸಲು ಪಾಲಿಸುವ ಹರಿಸಂತತ ||20||

ವರ ವಿಜಾಪುರದರಸು ತನ್ನಯ ಧರಣಿಯನು ಸಂಚರಿಸುತ |
ಮೆರೆವ ಕರಿತುರಗಾದಿ ಸೈನ್ಯದಿ ಬರಲು ಚನ್ನೂರ ಗ್ರಾಮದಿ ||21||

ಧಾರುಣೀಶನ ಸೈನ್ಯದಲಿ ಭಯ ತೋರಿತಂದಿನ ರಾತ್ರಿಯೊಳ್ |
ಸಾರಿದರು ಜನಘೋರ ಭಯಹರ ನಾರಸಿಂಹನ ಮಹಿಮೆಯಾ ||22||

ಎರಡನೆಯ ದಿನ ರಾತ್ರಿಯೊಳು ಮಲಗಿರಲು ಭೂಪನ ಸ್ವಪ್ನದಿ |
ಅರುಹಿದನು ವಟುರೂಪದಲಿ ನರಸಹರಿಯು ತರುವನು ತೋರಿಸಿ ||23||

ಕಟ್ಟಿಸೆಲೋ ಭೂಪತಿಯೆ ಮಂದಿರ ಕೃಷ್ಣವೇಣಿಯ ಗರ್ಭದಿ |
ಪುಟ್ಟುವನು ವರಕುವರ ನಿನಗತಿ ಶ್ರೇಷ್ಠನೆನ್ನಯ ಕರುಣದಿ ||24||

ಸುಪ್ರಭಾತದಲೆದ್ದು ನೃಪತಿಯು ಸ್ವಪ್ನ ಸೂಚಿತ ಸ್ಥಾನವ |
ಕ್ಷಿಪ್ರ ನೋಡುವೆನೆನುತ ಸೈನ್ಯದಿ ಕಾರ್ಪರಕೆ ಬಂದಿಳಿದನು ||25||

ಆನೆಗಳು ಕಟ್ಟಿರುವ ಶಿಲೆಗಳು ಕಾಣಿಸುವ ವೀಗಾದರು |
ಏನು ಧನ್ಯನು ನೃಪನು ನರಪಂಚಾನನನ ಸೇವಿಸಿದನು ||26||

ಬಂಧುರದ ಕಟ್ಟೆಯನು ಕಟ್ಟಿಸಿ ಮಂದಿರವ ಮೇಲ್ ನಿರ್ಮಿಸಿ |
ಇಂದಿರೇಶನ ಪದಕೆ ಭೂ ಸಂಬಂಧ ವೃತ್ತಿಯನೊಪ್ಪಿಸಿ ||27||

ಹಿಂದೆ ನೋಡಲು ಚಂದ್ರಶೇಖರ ನಂದಿಪತಿ ಮಂದಿರಗಳು |
ವಂದೇ ವತ್ಸರದೊಳಗೆ ಶಿಲ್ಪಗಳಿಂದ ಕಟ್ಟಿದ ಶಿಲೆಗಳು ||28||

ಆ ಮಹಾ ವೃಕ್ಷದಲ್ಲಿ ಸಾಲಗ್ರಾಮ ವೃಷ್ಟಿಯ ಮಹಿಮೆಯ |

ಪ್ರೇಮದಿಂದಲಿ ಕೇಳುವವರಿಗೆ ಕಾಮಿತಾರ್ಥವನೀವುದು ॥29॥

ಎರಡು ಶತ ವತ್ಸರದೊಳಗೆ ಬಂದಿರುವ ಮಾಧವ ಮಾಸದೊ ।
ಳಿರುವ ದ್ವಾದಶಿ ದಿನದ ತರುಣಿಯು ಸರಧಿ ಸೇರುವ ಸಮಯದಿ ।30॥

ಆರಿದರಾದ್ಯಾಯುಧಗಳನ್ನು ತಾ ಧರಸಿ ಷೋಡಶ ಕರಗಳಿಂ ।
ಪರಮ ಸುಂದರೆ ನರಹರಿಯು ಮೂರುತಿಯು ಹೊರಟನು ವೃಕ್ಷದಿ ॥31॥

ಸಕಲ ಯಾತ್ರೆಯ ಫಲವು ಲಭಿಸುವದಖಿಲ ತೀರ್ಥ ಸ್ನಾನದ ।
ಭಕುತಿಯಿಂದಶ್ವತ್ಥ ವೃಕ್ಷದಿ ವ್ಯಕತ ನರಹರಿ ದರ್ಶನ ॥32॥

ದಕ್ಷಿಣಾಯನ ಪರ್ವದಲ್ಲಿ ಈ ವೃಕ್ಷದಡಿಯಲ್ಲಿ ಸ್ನಾನವು ।
ಮೋಕ್ಷಮಾರ್ಗಕೆ ಸಾಧನವು ಪ್ರದಕ್ಷಿಣಾದಿಕಮೆಲ್ಲವು ॥33॥

ಮಂದಿರವ ಕಾಣುತಲೆ ಶ್ರೀ ಗೋವಿಂದ ಗೋವಿಂದೆನುತಲ್ಲಿ ।
ಬಂಧುವರ್ಗ ಸಮೇತ ಭಕುತರ ವೃಂದ ಬರುವದು ನೋಡಿರೈ ॥34॥

ಪಾಲಿನಭಿಷೇಕಾದಿ ಅರ್ಚನ ಪಾಲಕಿಯ ಸೇವಾವಧಿ ।
ವಾಲಗವ ಕೈ ಕೊಳ್ಳುತ ಭಕುತರ ಪಾಲಿಸುವ ನರಸಿಂಹನ ॥35॥

ವಾರವಾರಕೆ ಭಕ್ತಜನ ಪರಿವಾರ ಸೇವೆಯ ಕೊಳ್ಳುತ ।
ಘೋರತರ ಸಂಸಾರ ಭಯ ಪರಿಹಾರ ಮಾಡುವ ದೇವನ ॥36॥

ತಪ್ಪದಲೆ ಪ್ರತಿವರ್ಷ ದ್ವಿಜ ಸಂತರ್ಪಣಾದಿಗಳಿಂದಲಿ ।
ಕೊಪ್ಪರದಿ ನವರಾತ್ರಿ ಮೊದಲಾದುತ್ಸವಾದಿಗಳಾಗ್ವವು ॥37॥

ಹಿಂದೆ ಚಾತುರ್ಮಾಸ್ಯ ಕಾಲವು ಬಂದಿರಲು ವಿಭುದೇಂದ್ರರು ।
ಬಂದಿರಲ್ಲಿಗೆ ಶಿಷ್ಯರಾದ ಯತೀಂದ್ರ ನಾರಾಯಣಾರ್ಯರು ॥38॥

ಆ ಸಮಯದಿ ರಘುನಾಥ ತೀರ್ಥ ಯತೀಶರಿಲ್ಲಿಗೆ ಬಂದರು ।
ತೋಷದಲಿ ವಿಭುದೇಂದ್ರ ತೀರ್ಥ ಮುನಿಶರವರಿಗೆ ಪೇಳ್ದರು ॥39॥

ವೃಕ್ಷದಲಿ ಸನ್ನಿಹಿತ ನರಹರಿಯಕ್ಷನೆದುರಿಗೆ ನಮ್ಮಯ ।
ಶಿಷ್ಯರೋದುವ ಗ್ರಂಥದರ್ಥ ಪರೀಕ್ಷೆ ಮಾಡಿರಿ ಎಂದರು ॥40॥

ಮೌನಿ ರಘುನಾಥಾಖ್ಯರವರನು ಏನು ಓದುತಿರೆನ್ನಲು ।
ಆನು ಪೂರ್ವ ಸುಧಾಖ್ಯ ಗ್ರಂಥಾರ್ಥಾನುವಾದವ ಮಾಡಲು ॥41॥

ಮೇದಿನೀಯಲಿ ವಾದಿಜಯ ಸಂಪಾದಿಸಿರಿ ನೀವೆಂದರೂ ।
ಸಾದರದಿ ನಿಮಗಲ್ಲೆ ಜನ ಶ್ರೀ ಪಾದರಾಜರು ಎನ್ನಲಿ ॥42॥

ಹಿಂದೆ ಭೂಸುರನೋರ್ವ ಸತಿ ಸಹ ಬಂದು ಸೇವೆಯ ಮಾಡಲು ।
ಒಂದು ವತ್ಸರದೊಳಗೆ ಸತ್ಯಾನಂದ ಯತಿಗಳ ಜನನವು ॥43॥

ಸತ್ಯಧರ್ಮರು ಬಂದರೀ ಸುಕ್ಷೇತ್ರ ದರ್ಶನ ಮಾಡಲು ।
ಮುತ್ತಿನ್ಹಾರವ ಪದಕ ಸಹಿತಾಗಿತ್ತಿರೀ ನರಸಿಂಹಗೆ ॥44॥

ಇದ್ದರಿಲ್ಲಿ ಜ್ಞಾನವೃದ್ಧ ಜನಾರ್ದನಾಭಿದ ಒಡೆಯರು ।

ಶುದ್ಧ ಮನದಲಿ ನರಹರಿಯ ಪದಪದ್ಮ ಸೇವೆಯ ಮಾಡುತ ||45||

ಬಿಡದೆ ತಪವಾಚರಿಸಿ ಕಾರ್ಪರದೊಡೆಯನನುಪಮ ಕರುಣವ |
ಪಡೆದರಿವರನು ಸ್ಮರಿಸಿದವರಿಗೆ ಕೊಡುವ ಶ್ರೀ ಹರಿ ಸುಖವನ್ನು ||46||

ನಿತ್ಯದಲ್ಲಿ ಪರಿಶುದ್ಧ ಮಧುಕರ ವೃತ್ತಿಯಿಂ ತಂದನ್ನವ |
ಎತ್ತಿ ವೃಕ್ಷಕೆ ಕಟ್ಟುವರು ಇದು ಬುತ್ತಿ ನಾಳೆಗೆ ಎನ್ನುತ ||47||

ನಿನ್ನೆ ವೃಕ್ಷದಿ ತಂದು ಕಟ್ಟಿದ ಅನ್ನ ನದಿಯೊಳಗದ್ದುತ |
ಪನ್ನಗಾರಿ ಧ್ವಜನಿಗರ್ಪಿಸಿ ಉಣ್ಣುತಿಹರಾನಂದದಿ ||48||

ಮಂದಮತಿ ಭೂದೇವನೊಬ್ಬನು ನಿಂದೆ ಮಾಡಿದನಿವರನು |
ತಂದು ಕಟ್ಟಿದ ಅನ್ನ ತಂಗಳೆಂದು ತಿಳಿಯದೆ ಉಂಬರು ||49||

ನಿಂದೆ ಮಾಡಿದ ವಿಪ್ರನನ್ನು ಕರೆಸೆಂದರರ್ಚನ ಸಮಯದಿ |
ತಂದು ವೃಕ್ಷದಿ ಕಟ್ಟಿದನ್ನವ ತಂದು ಕೆಳಗಿಡಿರೆಂದರು ||50||

ಒಡೆಯರಾಜ್ಞೆಯ ಮೀರದಲೆ ತಂದಿಡಲು ಪೋಗಲು ವಿಪ್ರನು |
ಸುಡುವದನ್ನವು ಎಂದೆನುತ ತಂದಿಡಲು ಕೆಳಗಿಂತೆಂದರು ||51||

ನಿನ್ನೆ ತಂದಿತ್ತನ್ನ ತಂಗಳ ತಿನ್ನುವರು ನಾವೆಂದರೂ |
ಖಿನ್ನನಾದನು ಭೂಸುರನು ಕ್ಷಮೆಯನ್ನು ಬೇಡಿದನವರಿಗೆ ||52||

ತೋರಿದರು ವೃಂದಾನವದಿ ಮಯ್ಯೂರ ರೂಪವನೊಂದಿನ |
ಸಾರಿದವರಘ ದೂರಮಾಡುವ ಚಾರು ಚರಣರ ನಂಬಿರೈ ||53||

ಇರಲು ವಿಕೃತಿ ಸುವತ್ಸರದಿ ಬಂದಿರುವ ಪುಷ್ಯ ದ್ವಾದಶಿ |
ವರಶರೀರವ ತೋರಿದರು ಮಂದಿರವ ಕಟ್ಟುವ ಸಮಯದಿ ||54||

ಶ್ರೀ ನಿಕೇತನಂಘ್ರಿಯುಗಲ ಧ್ಯಾನದಲಿ ಕುಳಿತಿರುವರ |
ಸಾನುರಾಗದಿ ಸ್ಮರಿಪರಿಗೆ ಸುಜ್ಞಾನ ಲಾಭವು ಸತ್ವರ ||55||

ಈ ಮಹಾ ಸನ್ನಿಧಿಯಲ್ಲಿ ವಿಭುರಾಮ ಪುರದ ಕೃಷ್ಣಾರ್ಯರು |
ಪ್ರೇಮದಿಂದಲಿ ಭಜಕರಿಗೆ ಸತ್ಕಾಮಿತಾರ್ಥವನಿತ್ತಿರು ||56||

ನಂದಿಪತಿ ಗುಡಿಯೊಳಗೆ ಕುಳಿತಿರಲೊಂದು ದಿನ ಕೃಷ್ಣಾರ್ಯರು |
ಬಂದು ಬಹುಜನ ನೋಡುತಿರೆ ಫಣೀಂದ್ರ ರೂಪವತೋರ್ದರು ||57||

ಕಂದರಿಲ್ಲದೆ ಸೇವಿಸುವ ನರಸಾಂಬೆ ಇವರನು ಪ್ರಾರ್ಥಿಸೆ |
ನಂದದಲಿ ಫಲ ಕೊಡಲು ನಮ್ಮಯ ತಂದೆ ಭೀಮಾಚಾರ್ಯರು ||58||

ಪೊಡವಿಯೊಳು ಜನಿಸಿದರು ಕಾರ್ಪರದೊಡೆಯನರ್ಚಿಸಿ ಬಹು ದಿನ |
ಪಡೆದು ಕೀರ್ತಿಯ ಲೋಕದಲ್ಲಿ ಹರಿಯಡಿಯ ಧ್ಯಾನದೊಳಿರುವರು ||59||

ಗುರುವು ಕನ್ಯಾರಾಶಿಯಲಿ ಬಂದಿರಲು ಸುರಪುರದಿಂದಲಿ |
ಗುರುವರ ಶ್ರೀ ವಿಠ್ಠಲಾರ್ಯರು ವರ್ಷ ಪರ್ಯಂತರದಲಿ ||60||

ಮಾಸ ಸಂಖ್ಯದಿ ಶಿಷ್ಯರಿಂದಲಿ ವಾಸಮಾಡುತಲನುದಿನ |

ಶ್ರೀ ಸುಧಾದಿ ಪ್ರವಚನದಿ ನರ ಕೇಸರಿಯನೊಲಿಸಿದ್ದರು ||61||

ಸ್ಥಾನಮಹಿಮೆ ಇದೆಲ್ಲ ಸ್ಕಂದಪುರಾಣ ಸಿದ್ಧವು ನಿಶ್ಚಯ |
ಶ್ರೀನಿವಾಸನೆ ವಂದಿಸಿದ ನೀಕಾನನದ ನರಸಿಂಹನ ||62||

ಜಯತು ಕಾರ್ಪರ ನಿಲಯ ಸುರವರ 'ಜಯತು ಲಕ್ಷ್ಮೀ ಮನೋಹರ
ಜಯತು ಅಶ್ವತ್ಥಾಖ್ಯ ತರುವರ ಪೊರೆವುದೆನ್ನ ಕೃಪಾಕರ ||63||

ಧರಣಿಯಲಿ ಸುಕ್ಷೇತ್ರ ಕಾರ್ಪರ ಚರಿತೆಯನ್ನು ನಿರಂತರ |
ತರಣಿ ಉದಯದಿ ಸ್ಮರಿಸುವವರನ್ನು ಕರುಣಿಸುವ ಸಿರಿ ನರಹರಿ ||64||

ಧಾರಣೀಯಲಿ ಮೆರೆವ ಕೃಷ್ಣಾತೀರ ಕಾರ್ಪರ ನಿಲಯನ |
ಸಾರಿ ಭಜಿಸುವ ಭಕ್ತ ಜನ ಮಂದಾರ ಸಿರಿ ನರಸಿಂಹನ ||65||

ಶ್ರೀ ಮಧ್ವೇಶಾರ್ಪಣಮಸ್ತು

ಪರಿಶಿಷ್ಟ 3

ಶ್ವೇತಶೃಂಗ ಮಹಾತ್ಮೆ

ಉತ್ತರ ವಾಹಿನಿಯಾದ ಕೃಷ್ಣಾನದೀ ತೀರದ ಮತ್ತೊಂದು ಪ್ರಸಿದ್ಧ ಪುಣ್ಯಕ್ಷೇತ್ರ '' ಶ್ವೇತ - ಶೃಂಗ '' ಇದೂ ಸಹ ಒಂದು ಋಷ್ಯಾಶ್ರಮ ಪ್ರದೇಶ ಈ ಋಷ್ಯಾ ಶ್ರಮದ ಹತ್ತಿರ ನದೀ ಪ್ರವಾಹದಲ್ಲಿಯೇ '' ಶ್ವೇತಗಿರಿ '' ಎಂಬ ಪರ್ವತವಿದೆ. ಅದರ ಮಹಿಮೆ ಹೀಗಿದೆ.

ಪೂರ್ವದಲ್ಲಿ ಶ್ವೇತರಾಜನೆಂಬ ಒಬ್ಬ ಮಹಾರಾಜನು ನಾನವಿಧವಾದ ಅಪರಾಧಗಳನ್ನು ಮಾಡಿದನು. ಮಾತ್ರವಲ್ಲದೇ ಬ್ರಾಹ್ಮಣರಿಗೆ ಅನ್ನದಾನವನ್ನು ಮಾಡಲಿಲ್ಲ. ತತ್ಫಲವಾಗಿ ಮರಣಾನಂತರ ಪ್ರೇತರೂಪಿಯಾದ ಶ್ವೇತ ರಾಜರಿಗೆ ಆಹಾರವೇ ಗತಿಯಿಲ್ಲದೆ. ತನ್ನ ಶವದ ಮಾಂಸವನ್ನೇ ಕಿತ್ತಿ ತಿಂದು ಬದುಕಿರುವ ದುಸ್ಥಿತಿಯು ಬಂದೊದಗಿತ್ತು. ಹೀಗಿರುವಾಗ ದೈವ ವಶಾತ್ ಆತನಿಗೆ ಶ್ರೀ ನಾರದ ಮಹಾಮುನಿಗಳ ಭೇಟಿ ಆಯಿತು. ಉಚ್ಚ ಸ್ವರದಲ್ಲಿ ಹರಿನಾಮ ಕೀರ್ತನೆ ಮಾಡುತ್ತ ಬಂದ ದೇವ ಮುನಿಗಳಿಗೆ ವಂದಿಸಿ ತನ್ನ ದುಃಖವನ್ನು ಹೇಳಿಕೊಂಡು ತಾನು ಪಾರಾಗುವ ಮಾರ್ಗವನ್ನು ಅರುಹಬೇಕೆಂದು ಬೇಡಿದನು. ಆಗ ಶ್ರೀ ನಾರದರು ಕನಿಕರಪಟ್ಟು'' ಓ ! ಶ್ವೇತ ಭೂಪತಿಯೇ ! ಈ ದೇಶದಲ್ಲಿ ಕೃಷ್ಣಾ ಉತ್ತರ ವಾಹಿನಿಯಾಗಿ ಸನ್ನಿಹಿತಳಾಗಿರುವಳು. ಆ ಪುಣ್ಯಕ್ಷೇತ್ರಕ್ಕೆ ಹೋಗಿ ತಪಸ್ಸು ಮಾಡಿದರೆ ಈ ಕಷ್ಟದಿಂದ ಪಾರಾಗುವಿ '' ಎಂದು ತಿಳಿಸಿದರು. ಅದರಂತೆ ಶ್ವೇತ ರಾಜನು ಅಲ್ಲಿಗೆ ಹೋಗುವುದಾಗಿ ಒಪ್ಪಿ ಆ ಕ್ಷೇತ್ರದ ಮಹಿಮೆಯನ್ನು ತಿಳಿಯಪಡಿಸಬೇಕೆಂದು ಬೇಡಿದನು . ಆಗ ನಾರದರು '' ನೋಡು ರಾಜನೇ, ಕಾರ್ಪರಾರಣ್ಯ ಕ್ಷೇತ್ರದ ಅಪರ ಭಾಗದಲ್ಲಿ ಶ್ವೇತ ಶೃಂಗ ಕ್ಷೇತ್ರ ಪ್ರದೇಶವಿದೆ. ಅದಕ್ಕೂ ಪೂರ್ವ ದಿಕ್ಕಿಗೆ ಭಾರ್ಗವ ಜಮದಗ್ನಿ ಋಷಿಗಳ ತಪೋವನವಿದೆ. ಅಲ್ಲಿಯೇ ಆ ಋಷಿಗಳಿಗೆ ಶ್ರೀ ಮನ್ನಾರಾಯಣನು ಪರಶುರಾಮನೆಂಬ ಪುತ್ರನಾಗಿ ಜನಿಸಿದನು. ಅಲ್ಲಿಯೇ ಆತನು ಸಪ್ತ ಋಷಿಗಳೊಂದಿಗೆ ವಿಹರಿಸುವ ಪ್ರದೇಶವಿದೆ. ನೀನು ಅಲ್ಲಿಗೆ ಹೋಗಿ ಕಠಿಣವಾದ ತಪಸ್ಸನ್ನಾಚರಿಸಿ ಶ್ರೀ ಮನ್ನಾರಾಯಣನನ್ನು ಪ್ರಸನ್ನಿಕರಿಸು ಆ ಸ್ವಾಮಿಯ ಪರಮಾನು ಗ್ರಹದಿಂದ ನಿನ್ನ ಆತ್ಮ ಮಾಂಸ ಭುಂಜಿಸುವ ಮಹಾದೋಷವು ನಿವೃತ್ತವಾಗುವುದು''ಎಂದು ತಿಳಿಸಿದರು ಅದರಂತೆ ಶ್ವೇತ ರಾಜನು ಈ ಪ್ರದೇಶಕ್ಕೆ ಬಂದು ಎರಡು ಸಾವಿರ ವರ್ಷಕಾಲ ಕಠಿಣ ತಪಸ್ಸನ್ನು ಆಚರಸಿದನು.

ಆತನ ಸಕಲ ದುಃಖವೂ ಪರಿಹಾರವಾಯಿತು. ಶ್ವೇತರಾಜನು ತಪಸ್ಸು ಮಾಡಿದ ಪ್ರದೇಶವಾದರಿಂದ ಇದಕ್ಕೆ '' ಶ್ವೇತ ಪರ್ವತ'' ವೆಂಬ ನಾಮ ಪ್ರಾಪ್ತವಾಯಿತು. ಇಲ್ಲಿ ಶ್ರೀ ರಾಮಚಂದ್ರನೂ ನಿತ್ಯ ಸನ್ನಿಹಿತನಾಗಿರುವನು.

ಅನಂತರ ''ಶ್ರುಂಗಿ'' ಎಂಬ ಮಹಾ ಋಷಿಗಳು ಇಲ್ಲಿಗೆ ಬಂದು ಇಲ್ಲಿಯ ತಟಾಕದಲ್ಲಿ ಸ್ನಾನಾದ್ಯನುಷ್ಠಾನವನ್ನೂ ತಪಸ್ಸನ್ನೂ ಆಚರಿಸಿದ್ದರಿಂದ ಸಿದ್ಧಿಯನ್ನು ಪಡೆದರು. ಮಾನವರು ಈ ಕ್ಷೇತ್ರ ಸ್ಥದೈವದ, ಕ್ಷೇತ್ರ ಮಹಿಮೆಯ ಸ್ಮರಣೆ ಮಾತ್ರದಿಂದ ಸಕಲ ಪಾಪಗಳಿಂದಲೂ ಮುಕ್ತರಾಗಿ ತಕ್ಷಣದಲ್ಲೇ ಸತ್ಕೀರ್ತಿವಂತರಾಗುವರು. ಜ್ಞಾನ ಭಕ್ತಿ ವೈರಾಗ್ಯಗಳನ್ನು ಪಡೆಯುವರು. ಅರಣೋದಯದಲ್ಲಿದ್ದು ಸ್ನಾನಾದಿಗಳನ್ನಾಚರಿಸಿದರೆ ಕುಲಕೋಟಿ ಉದ್ಧಾರವಾಗುವುದು. ಈ ಕ್ಷೇತ್ರ ಪ್ರದೇಶವು ಕಾರೆಗಿಂತಲೂ ಶತಗುಣಾಧಿಕವಾದುದು. ಇಲ್ಲಿ ಬ್ರಹ್ಮಾದಿ ಸುರರೆಲ್ಲರು ಸನ್ನಿಹಿತರಾಗಿ ಭಗವದ್ಭಜನ ಮಾಡುವರು. ಇಂದ್ರನು ಅಹಲ್ಯೆಯ ಶೀಲಭಂಗದ ಪಾಪವನ್ನು ಇಲ್ಲಿ ಬಂದು ಸ್ನಾನ ಮಾಡಿಯೇ ಕಳೆದುಕೊಂಡನೆಂದೂ ಉಲ್ಲೇಖವಿದೆ.

ಧನುರಾಕಾರವಾಗಿರುವ ಶ್ರೀ ಕಾರ್ಪರಾರಣ್ಯದಿಂದ ಹಿಡಿದು ಶ್ವೇತಶೃಂಗ (0) ಪ್ರಾಂತದವರೆಗೂ ಇರುವ ಪ್ರದೇಶಕ್ಕೆ ಪಂಚಕೋಶ ಕ್ಷೇತ್ರವೆಂದೂ ಹೆಸರಿದೆ. ಕಾರ್ಪರ ಕ್ಷೇತ್ರದಿಂದ ಹಿಡಿದು ಶ್ವೇತ ಶೃಂಗದವರೆಗೂ ಮುನಿಗಳು ಸಂಚರಿಸುವ ಸುರಂಗದ್ವಾರವಿದೆ. ಈ ಶ್ವೇತ ಶೃಂಗದ ಸುತ್ತ ಎಂಟು ತೀರ್ಥಗಳಿವೆ ಅವು ಯಾವುವೆಂದರೆ 1) ಮಲ್ಲಿಕಾರ್ಜುನ 2) ಸೀತರಾಯ ತೀರ್ಥ 3) ಜಮದಗ್ನಿ ತೀರ್ಥ 4) ಶೃಂಗಿ ತೀರ್ಥ 5) ಶ್ವೇತ ತೀರ್ಥ 6) ಕಲ್ಮಷಹರ ತೀರ್ಥ 7) ರುದ್ರ ತೀರ್ಥ 8) ನರಸಿಂಹ ತೀರ್ಥ.

ಶ್ರೀ ರಾಮಚಂದ್ರನು ಸೀತಾ ಲಕ್ಷ್ಮಣರ ಸಹಿತವಾಗಿ ಅರಣ್ಯವಾಸಕ್ಕೆ ಬಂದಾಗ್ಗೆ ಇಲ್ಲಿ ತಂಗಿದ್ದನೆಂದು ಹೇಳುತ್ತಾರೆ. ಸೀತೆಯು ಸ್ನಾನ ಮಾಡಿ ತನ್ನ ಒದ್ದೆ ವಸ್ತ್ರವನ್ನು ಬಿಸಿಲಿಗೆ ಒಣಗಲೆಂದು ಬಂಡೆಯೊಂದರ ಮೇಲೆ ಹರಡಿದ್ದಳು. ಆ ಚಿಹ್ನೆಯು ಈಗಲೂ ಕಾಣಬರುವುದು. ಅದನ್ನು ಜನರು '' ಸೀತಾ ಸೆರಗು '' ಎಂದು ಗುರುತಿಸುತ್ತಾರೆ. ಶ್ವೇತ ಪರ್ವತದಲ್ಲಿ ಕಾಮಧೇನುವಿನ ಪಾದದ ಗುರುತುಗಳಿವೆ. ಬೃಹಸ್ಪತಿಯು ಕನ್ಯಾರಾಶಿಗೆ ಬಂದಾಗ ಈ ಗಿರಿಯ ಹತ್ತಿರ ಉಪವಾಸವಿದ್ದು ಪಿತೃಕಾರ್ಯಗಳನ್ನು ನೆರವೇರಿಸಿದರೆ ಅನಂತ ಪುಣ್ಯರಾಶಿಯು ಪ್ರಾಪ್ತವಾಗುವುದು.

ಪೂರ್ವದಲ್ಲಿ ದಿಲೀಪ ಚಕ್ರವರ್ತಿಯೂ, ಸಗರ ಚಕ್ರವರ್ತಿಯೂ ಈ ಕೃಷ್ಣಾನದೀ ತೀರದಲ್ಲಿ ತುಲಾಭಾರವೇ ಮುಂತಾದ ಮಹೋತ್ಸವಗಳನ್ನು ನೆರವೇರಿದರು ಇಲ್ಲಿ ಶ್ರೀ ಕೇಶವಮೂರ್ತಿ ಪ್ರತಿಷ್ಠಿತವಾಗಿದೆ.

ಈ ಶ್ವೇತ ಶೃಂಗದ ಮಹಿಮೆಯನ್ನು ವಿಜಯದಾಸರು ತಮ್ಮ ತೀರ್ಥ ಸುಳಾದಿಗಳಲ್ಲಿ 88 ನೇ ಯ ಪದದಲ್ಲಿ ನಿರೂಪಿಸಿದ್ದಾರೆ.

ವರದೇಂದ್ರ ಹರಿದಾಸ ಸಾಹಿತ್ಯ ಮಂಡಳಿಯ ಪ್ರಕಟಣೆ

ಪು. 327, 328, 379.



ಶ್ರೀ ಇಬ್ರಾಹಿಂಪುರ ಅಪ್ಪಾ ಅವರು